



★ E-Bengaluru Beragu ★
MAG (2) PRB/CR/36/24-25
T/KN2024/2076


# ಈ–ಬೆಂಗಳೂರು ಬೆರಗು

ಸಂಪುಟ: 2 Vol: 2 ಸಂಚಿಕೆ: 6 Issue: 6 ಅಕ್ಟೋಬರ್ 15 - 30 ಪುಟಗಳು: 12 Pages: 12 ಬೆಲೆ: 15.00 ರೂ.

## ಮಾರಿಯಾಗೆ ಶಾಂತಿಧೂತರ ನೋಬೆಲ್ ಪ್ರಶಸ್ತಿ





## ಬಳ್ಳಾರಿ ಇತಿಹಾಸ ಪತ್ತೆ ಮಾಡಿದ್ದ ಭೂವಿಜ್ಞಾನಿ ರಾಬರ್ಟ್ ಬ್ರೂಸ್ಫೂಟ್






## ಬೆಂಗಳೂರಿನ ಜನತೆಗೆ ಬಿಗ್ ರಿಲೀಫ್: ಜಿಬಿಎ ವ್ಯಾಪ್ತಿಯಲ್ಲಿ 1200 ಚದರಡಿವರೆಗಿನ ನಿವೇಶನದಲ್ಲಿನ ಮನೆಗಳಿಗೆ OC ವಿನಾಯಿತಿ




## ಶೋಲೆ ಹಿಂದಿ ಚಿತ್ರಕ್ಕೆ ಸುವರ್ಣ ಸಂಭ್ರಮ




ವೆಸ್ಟ್‌ಇಂಡೀಸ್ ವಿರುದ್ಧ ಪ್ರಥಮ ಟೆಸ್ಟಿನಲ್ಲಿ ಭಾರತಕ್ಕೆ ಜಯ



E-Bengaluru Beragu





| | | | | |
|---|---|---|---|---|
| 1. ಪತ್ರಿಕಾ ಸುದ್ದಿ | 2. ಬೆರಗು ಚುಂಬಕ | 3. ಜ್ಞಾನ–ವಿಜ್ಞಾನ–ಪರಿಜ್ಞಾನ | 4. ಮಾಧ್ಯಮ ಸುದ್ದಿ | 5. ಆಡಳಿತ ಸುದ್ದಿ |
| 6. ಸಂಗೀತ ಸಮಾರಂಭ | 7. ಸಭೆ ಸಾಹಿತ್ಯ ಕವನ | 8. ಹಣಕಾಸು ವ್ಯಾಪಾರ | 9. ಆರೋಗ್ಯ ಮತ್ತು ವೈದ್ಯಕೀಯ | 10. ಇತಿಹಾಸ ಪುಟಗಳಿಂದ |
| 11. ಜಾಲತಾಣ ಬೆರಗು | 12. ಯೂಟೂಬ್ ಲೋಕ | 13. ಸಿನಿಮಾ ರಂಗ | 14. ಕ್ರೀಡಾರಂಗ | 15. ಸಂಪಾದಕರ ಪುಟ |



## ಮುನ್ನುಡಿ

ವಿಶಾಲ ಕರ್ನಾಟಕದ ಕನ್ನಡ ಓದುಗ ಅಭಿಮಾನಿಗಳಲ್ಲಿ ವಿನಂತಿಯ ಬಿನ್ನಹ..........

ಕನ್ನಡ ನಾಡಿನ ಸಹೃದಯ ಅಕ್ಷರ ಮಿತ್ರರ ಪ್ರೇರೇಪಣೆಯಿಂದ ಉದಯವಾಗಿ ಅತ್ಯಂತ ಸ್ಪರ್ಧಾತ್ಮಕ ಮುದ್ರಣ ಪ್ರಪಂಚ/ಜಾಲತಾಣ ಮಾಧ್ಯಮದಲ್ಲಿ ಶ್ರಮವಹಿಸಿ ಹೊರತರುತ್ತಿರುವ ನಮ್ಮ ಈ ಪ್ರಯತ್ನ ಯಶಸ್ವಿಯಾಗಲು ಉತ್ಸಾಹಿ ಹೃದಯಗಳಲ್ಲಿ ಈ ಬೆಂಗಳೂರು ಬೆರಗು ಪಾಕ್ಷಿಕ ಪತ್ರಿಕೆಯನ್ನು ಪ್ರೋತ್ಸಾಹಿಸುವಂತೆ **'ಈ ಬೆಂಗಳೂರು ಬೆರಗು'** ತಂಡದ ಪರವಾಗಿ ಕೋರುತ್ತೇವೆ.

ದಿನದ, ವಾರದ, ತಿಂಗಳ ಟ್ಯಾಬ್‌ಲಾಡ್ ಸರಳಿ ಪ್ರಚುರವಾಗಿ ಮಾರುಕಟ್ಟೆಯಲ್ಲಿ ಬಿಡುಗಡೆಯಾಗುತ್ತಿರುವ ಈ ಕಠಿಣ ಸಮಯದಲ್ಲಿ, ಪ್ರತಿ ತಿಂಗಳಲ್ಲಿ ಎರಡು ಪಾಕ್ಷಿಕಗಳನ್ನು ನಿಖರವಾಗಿ ಹದಿನೈದನೇ ದಿನವೇ ಅಂದರೆ ಪ್ರತಿ ತಿಂಗಳು 1ನೇ ದಿನಾಂಕ ಹಾಗೂ 16ನೇ ದಿನಾಂಕದಿಂದ ಬಿಡುಗಡೆ ಮಾಡಲು ಸಿದ್ಧಪಡಿಸಿ ತಮ್ಮ ಮುಂದಿಡಲೂ ಪ್ರಯತ್ನಿಸಲಾಗುವುದು.

ಈ ಸಮಕಾಲೀನ ಮುಕ್ಕಾಲು ಪಾಲು ಟ್ಯಾಬ್‌ಲಾಡ್‌ಗಳಲ್ಲಿ ಸಂಚಲನಾತ್ಮಕ ಸುದ್ದಿಗೆ, ಕೊಲೆ, ರಾಜಕೀಯ ವೈಷಮ್ಯ ಹೊಡೆಬಡೆದಾಟಗಳ ದಾಟಿಯಲ್ಲಿ ಬರಹ ಮತ್ತು ಲೇಖನಗಳಿಗೆ ಆದ್ಯತೆ ನೀಡಿ ರಂಗು ರಂಗಾದ ವಿಷಯಗಳನ್ನು ಮುದ್ರಿಸಿ ಸ್ಪರ್ಧೆ ಏರ್ಪಟ್ಟಿರುವ ಮಾರುಕಟ್ಟೆಯಲ್ಲಿ ಗಮನ ಸೆಳೆಯಲು ಇದಕ್ಕೆ ಭಿನ್ನವಾಗಿ ನಮ್ಮ ಈ ಬೆಂಗಳೂರು ಬೆರಗು ಹೊರತರಲು ಪ್ರಯತ್ನಿಸುತ್ತಿದ್ದೇವೆ.

ಆದರೆ ನಮ್ಮ ಈ ಪಾಕ್ಷಿಕ ಸಾಧ್ಯವಾದ ಮಟ್ಟಿಗೆ ಅಂತಹ ಸಂಚಲನ, ಕ್ರೈಂ, ಸೆಕ್ಸ್ ಉನ್ಮಾದ ವಿಷಯಗಳ ಆದ್ಯತೆ ನೀಡದೆ ಪ್ರಕೃತಿ, ಪ್ರೇಮ, ಸಾಹಿತ್ಯ–ಸಂಗೀತ ಲೇಖನ ಹಾಗೂ ಚಿತ್ರಗಳಿಗೆ ಆದ್ಯತೆ ನೀಡಿ ಪ್ರಚಾರ ಮಾಡಲು ಪ್ರಯತ್ನಿಸುತ್ತೇವೆ. ಈ ಪ್ರಯತ್ನಕ್ಕೆ ಸುವಿಶಾಲ ಬೆಂಗಳೂರು ಮತ್ತು ಸಹೃದಯ ಕನ್ನಡ ಓದುಗರ ಪ್ರೀತಿ, ವಿಶ್ವಾಸ, ಪ್ರೋತ್ಸಾಹ ಹಾಗೂ ಆಶೀರ್ವಾದಗಳ ಸದಾ ನಮ್ಮ ಮೇಲಿರಲಿ ಎಂದು ಬಯಸುತ್ತಾ.

ಸದಾ ನಿಮ್ಮ ಸೇವೆಯಲ್ಲಿ
**ಸಂಪಾದಕರ ಸಲಹಾ ಮಂಡಳಿ**


## ಕವನ

ಕತೆ ಕವಿತೆ ಬರೆಯ ಬೇಕೆಂಬ ತುಡಿತ ನನ್ನದಾದರೂ
ಬರೆಸಿಕೊಳ್ಳಂಬ ಬಯಕೆ ನಿನ್ನದು.
ಕನಸುಗಳ ಕಟ್ಟಿ ಕಟ್ಟಿ ಊಹೆಗಳ ಲೋಕದಲ್ಲಿ ತೇಲಾಡಿ
ಭ್ರಮಾ ಲೋಕದಲ್ಲಿ ಓಲಾಡಿತ್ತೀವಿ
ಬದುಕಿನ ಜಂಜಾಟದಲ್ಲಿ ಸರಿವ ಸಂಸಾರವೆಂಬ ಈ ಬದುಕಿನಲ್ಲಿ
ಕಾಲ ಕಳೆದು ಕರಗಿ ಹೋಗುತ್ತಿರುತ್ತೆ ಆದರೂ ಕಣ್ಮುಚ್ಚಿ ನಿದ್ದೆ ಮಾಡುತ್ತೀವಿ
ಬೆಳಿಗ್ಗೆ ಎದ್ದು ಬುದ್ದ ಬಸವ ಗಾಂಧಿ ಎನ್ನುತ್ತ ಕೂಗಿ
ಕಂಗಾಲಾದ ಸಮ ಸಮಾಜಮುಖಿ ಜನರ ಗೋಳು
ಕತ್ತಲು ಕವಿದ ನಂತರ ಉರಿವ ಒಡಲು ಹಿಡಿದು ಬಿಕ್ಕಿ ಬಿಕ್ಕಿ ದುಃಖಿಸುತ್ತೆ
ಅದಕ್ಕೆಂದೇ ಸಾಯಂಕಾಲ ಆದರೆ ಸೇವಿಸುತ್ತಾರೆ ಸೇಂದಿ
ನೆತ್ತರೂ ಬಯಸದ ಮಸಣವು ಸದಾ ಮೌನದೆ ದುಃಖಿಸುತ್ತೆ
ಕಾಣದ ಲೋಕದ ಬಾಗಿಲು ತೆರೆದಿಡುತ್ತೆ
ಆದರೆ ಸ್ಥಿತ ಪ್ರಜ್ಞನಿಗೆ ಸಾವಿನ ಭಯವು ಸತ್ತರೂ ಹತ್ತಿರ ಸುಳಿಯುವುದಿಲ್ಲ.
ಏನು ಬರೆದೆಯೋ ಬ್ರಹ್ಮ ಎಂಬ ದಾಸರ ನುಡಿ ನೋಡಿ
ಕಂಡರಿಯದೆ ಕಾಣದ್ದು ಬರೆಯಲಾರನೆಂಬ ಮನಸ್ಸು ನನ್ನದು.

**–ವಿಜಯ್ ಬೆಂಗಾವಲಿ**

## ಇಬ್ಬನಿ ಕರಗಿತೆ

ಚಳಿಗಾಲದ ಇಳೆಯ ಗಗನಾವರಿಸಿದ ಇಬ್ಬನಿ
ಧರೆಗಿಳಿದ ಬೆಳ್ಳಿಯಂಚಿನ ನಿಬ್ಬರೆಗೇ ಇಬ್ಬನಿ
ಮೆಚ್ಚಿನ ಮಡದಿ ಬೆಚ್ಚಗೆ ತಬ್ಬಿಕೊಂಡ ಮಾತ್ರಕೆ ಇಬ್ಬನಿ ಕರಗಿತೆ
ಚೆಲುವೆಯ ಚಂದ ಗಲ್ಲವ ಸವರಿದಡೆ ಕರಗಿತೆ
ಸಂಪಿಗೆ ಘಮಲು ಅಮಲೇರುವ ಗಳಿಗೆಯಲ್ಲಿ ಕರಗಿತೆ
ಮಾವು ಮುದರಿ ನೆಲಸೇರುವ ಮುಂಗಾರು ಮಳೆಯಲ್ಲಿ ಕರಗಿತೆ
ಮುದಿರಿ ಚದರಿ ಬೋರಲಾಗಿ ನಲಿನಲಿಸುವ ಜಲಪಾತದೆ ಕರಗಿತೆ
ಬೆಟ್ಟಗುಡ್ಡ ಸೀಳಿ ಗುಡುಗು ಸಿಡಿಲುವೊಡದ ಬೆಂಕಿಯಲ್ಲಿ ಕರಗಿತೆ
ಇಳೆಗೆ ಇಳಿಯುವ ಜಲಧಾರೆಯ ಕಣ್ಮಣಿ ಈ ಇಬ್ಬನಿ.



ಈ ಬೆಂಗಳೂರು ಬೆರಗು ಪತ್ರಿಕೆ ವಿಭಾಗಕ್ಕೆ ಲೇಖನಗಳು, ವ್ಯಕ್ತಿಪರಿಚಯ, ಪುಸ್ತಕ ವಿಮರ್ಶೆ, ಸಿನೆಮಾ ವಿಮರ್ಶೆ, ನಾಟಕ ವಿಮರ್ಶೆ, ಕವನ, ಸಾಮಾಜಿಕ ಪ್ರತಿಕ್ರಿಯೆ, ಸಂಪಾದಕರಿಗೆ ಪತ್ರ, ದೂರು–ದುಮ್ಮಾನ ಮೊದಲಾದ ವಿಷಯ ವೈವಿಧ್ಯಗಳನ್ನು ಚಿಕ್ಕ ಮತ್ತು ಚೊಕ್ಕವಾಗಿ 1000 ಪದಗಳು ಮೀರದಂತೆ ಕಳುಹಿಸಲು ಈ ಕೆಳಗಿನ ಇ–ಮೇಲ್ ವಿಳಾಸವನ್ನು ಬಳಸಿ ಸಲ್ಲಿಸಬಹುದಾಗಿರುತ್ತದೆ.

**ಕಥೆ–ಕವನ ಕಳುಹಿಸುವ ಮುನ್ನ**

* ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು.
* ಕಥೆಗೆ ಗರಿಷ್ಠ ಮಿತಿ–ಎರಡು ಸಾವಿರ ಪದಗಳು.
* ಕಥೆ–ಕವನಗಳು ಯೂನಿಕೋಡ್‌ನಲ್ಲಿ ಇರಬೇಕು.
* ಕಥೆ/ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ–ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು.
* ಅಂಚೆ ಮೂಲಕ ಕಳುಹಿಸುವವರು ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು.
* ಕಳುಹಿಸಿರುವ ರಚನೆಗಳನ್ನು ಹಿಂದಿರುಗಿಸುವುದಿಲ್ಲ.
* ಸಂಪಾದಕರ ತೀರ್ಮಾನವೇ ಅಂತಿಮ.

ಇ–ಮೇಲ್ ವಿಳಾಸ : ebbvijay@gmail.com

**ಇ–ಬೆಂಗಳೂರು ಬೆರಗು ವಿಳಾಸ:** ಇ–ಬೆಂಗಳೂರು ಬೆರಗು, ಕೇರಾಫ್ ಚನ್ನಮ್ಮ ಅಸೋಸಿಯೇಟ್ಸ್, ನಂ.1303, ನೆಲಮಹಡಿ, 4ನೇ ಕ್ರಾಸ್, ಅಶೋಕ್ ನಗರ, ಬಿಎಸ್‌ಕೆ 1ನೇ ಹಂತ, ಕತ್ರಿಗುಪ್ಪೆ/ವಿದ್ಯಾಪೀಠ ಮುಖ್ಯರಸ್ತೆ, ಬೆಂಗಳೂರು–560 050.

EBB Office # 1303, Ground Floor, 4th Cross, Ashok Nagar, BSK 1st Stage, Kathriguppe/Vidyapeeta Main Road, Bengaluru-560 050.

# ಮಾರಿಯಾಗೆ ಶಾಂತಿಧೂತರ ನೋಬೆಲ್ ಪ್ರಶಸ್ತಿ




**ವೆ**ನೆಜುವೆಲಾದ ವಿಪಕ್ಷ ನಾಯಕಿ ಮಾರಿಯಾ ಕೊರಿನಾ ಮಚಾದೋ ಅವರಿಗೆ ಈ ಬಾರಿಯ ನೋಬೆಲ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ನೊಬೆಲ್ ಶಾಂತಿ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕನಸು ಭಗ್ನಗೊಂಡಿದೆ.

ವೆನೆಜುವೆಲಾದ ಜನರಿಗೆ ಪ್ರಜಾಪ್ರಭುತ್ವ ಹಕ್ಕುಗಳನ್ನು ಉತ್ತೇಜಿಸುವಲ್ಲಿ ಅವಿಶ್ರಾಂತ ಕೆಲಸ ಮತ್ತು ಸರ್ವಾಧಿಕಾರಿ ಪ್ರಜಾಪ್ರಭುತ್ವದ ವಿರುದ್ಧ ನ್ಯಾಯಯುತ ಮತ್ತು ಶಾಂತಿಯುತ ಪರಿವರ್ತನೆ ಸಾಧಿಸಲು ಹೋರಾಟ ನಡೆಸುತ್ತಿರುವ ಮಾರಿಯಾ ಕೊರಿನಾ ಮಚಾದೋ ಅವರಿಗೆ 2025ರ ನೊಬೆಲ್ ಶಾಂತಿ ಪ್ರಶಸ್ತಿಯನ್ನು ನೀಡಲು ನಾರ್ವೆಯ ನೊಬೆಲ್ ಸಮಿತಿ ತೀರ್ಮಾನಿಸಿದೆ.

ಮಾರಿಯಾ ಕೊರನಾ ಮಚಾದೊ ಅವರು 2002ರಲ್ಲಿ ಚುನಾವಣಾ ಮೇಲ್ವಿಚಾರಣೆ ಮತ್ತು ನಾಗರಿಕರ ಹಕ್ಕುಗಳ ಬಗ್ಗೆ ಅರಿವು ಮೂಡಿಸಲು ಮೀಸಲಾಗಿರುವ ಸ್ಮೇಟ್ ಎಂಬ ಸಂಘಟನೆಯ ಸಹ–ಸ್ಥಾಪಕರೊಂದಿಗೆ ತಮ್ಮ ರಾಜಕೀಯ ಪ್ರಯಾಣವನ್ನು ಪ್ರಾರಂಭಿಸಿದರು. 2013ರಲ್ಲಿ ತಾವೇ ಸ್ಥಾಪಿಸಿದ ಉದಾರವಾದಿ ರಾಜಕೀಯ ಪಕ್ಷವಾದ ವೆಂಟೆ ವೆನೆಜುವೆಲಾದ ರಾಷ್ಟ್ರೀಯ ಸಂಯೋಜಕರಾದರು.

ತಮ್ಮ ವೃತ್ತಿಜೀವನದುದ್ದಕ್ಕೂ ಮಚಾದೊ ಅವರು, ಹ್ಯೂಗೋ ಚ್ವೆಜ್ ಮತ್ತು ನಿಕೋಲ್ಸ್ ಮಡುರೊ ಅವರ ಆಡಳಿತದ ವಿಮರ್ಶಕರಾಗಿದ್ದರು. ಮಾರಾ ಕೊರಿನಾ ಅವರು ವೆನೆಜುವೆಲಾದಲ್ಲಿ ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ರಕ್ಷಣೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

1967ರ ಅಕ್ಟೋಬರ್ 7ರಂದು ಕ್ಯಾರಕಾಸ್‌ನಲ್ಲಿ ಜನಿಸಿದ ಮಾರಿಯಾ, ಮಾರಾ ಕೊರಿನಾ ಮಚಾದೊ ಅವರು ವೆನೆಜುವೆಲಾದ ಖ್ಯಾತ ರಾಜಕಾರಣಿ, ಕೈಗಾರಿಕಾ ಎಂಜಿನಿಯರ್ ಮತ್ತು ಮಾನವ ಹಕ್ಕುಗಳ ವಕೀಲರಾಗಿದ್ದಾರೆ.

ಬೆಲ್ಲೊ ಕ್ಯಾಥೋಲಿಕ್ ವಿಶ್ವವಿದ್ಯಾನಿಲಯದಿಂದ ಕೈಗಾರಿಕಾ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದಾರೆ.

ಕ್ಯಾರಕಾಸ್‌ನಲ್ಲಿರುವ ಇನ್‌ಸ್ಟಿಟ್ಯೂಟೊ ಡಿ ಎಸ್ಟುಡಿಯೋಸ್ ಸುಪೀರಿಯರ್ಸ್ ಡಿ ಅಡ್ಮಿನಿಸ್ಟ್ರೇಷಿಯನ್ (ಐಇಎಸ್‌ಎ) ನಿಂದ ಫೈನಾನ್ಸ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ್ದಾರೆ.

# ಬೆಂಗಳೂರಿನ ಜನತೆಗೆ ಬಿಗ್ ರಿಲೀಫ್: ಜಿಬಿಎ ವ್ಯಾಪ್ತಿಯಲ್ಲಿ 1200 ಚದರಡಿವರೆಗಿನ ನಿವೇಶನದಲ್ಲಿನ ಮನೆಗಳಿಗೆ OC ವಿನಾಯಿತಿ




**ಸಣ್ಣ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರದಿಂದ ವಿನಾಯಿತಿ ನೀಡಿದ ಸರ್ಕಾರ, ಸಾರ್ವಜನಿಕರಿಗೆ ಸಕಾಲದಲ್ಲಿ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಈ ಕ್ರಮ.**

ಗ್ರೇಟರ್ ಬೆಂಗಳೂರು ಪ್ರಾಧಿಕಾರ (GBA) ವ್ಯಾಪ್ತಿಯಲ್ಲಿ 1200 ಚದರ ಅಡಿವರೆಗಿನ ನಿವೇಶನದಲ್ಲಿ ನಿರ್ಮಿಸುವ ಕೆಲವು ವರ್ಗದ ಕಟ್ಟಡಗಳಿಗೆ ಸ್ವಾಧೀನಾನುಭವ, (Occupancy Certificate-OC) ಪಡೆಯುವುದರಿಂದ ವಿನಾಯಿತಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಸರ್ಕಾರದ ಈ ನಿರ್ಧಾರವು ಸಾರ್ವಜನಿಕರಿಗೆ ಸಾಕಷ್ಟು ಅನುಕೂಲವಾಗಲಿದೆ.

**ಆದೇಶದ ಪ್ರಮುಖಾಂಶಗಳು ಏನು**

* **ಯಾವುದಕ್ಕೆ ವಿನಾಯಿತಿ?:** 1200 ಚದರ ಅಡಿ (111.48 ಚದರ ಮೀಟರ್) ವಿಸ್ತೀರ್ಣದವರೆಗಿನ ನಿವೇಶನಗಳಲ್ಲಿ ನಿರ್ಮಿಸುವ ನೆಲ + 2 ಅಂತಸ್ತು ಅಥವಾ ಸ್ಟಿಲ್ಸ್ + 3 ಅಂತಸ್ತಿನವರೆಗಿನ ವಸತಿ ಕಟ್ಟಡಗಳಿಗೆ ಈ ವಿನಾಯಿತಿ ಅನ್ವಯಿಸುತ್ತದೆ.

* **ಕಾಯ್ದೆಯ ಅಧಿಕಾರ:** ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಕಲಂ 241(7)ರ ಅಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಬಳಸಿಕೊಂಡು ಈ ಆದೇಶವನ್ನು ಹೊರಡಿಸಲಾಗಿದೆ. ಈ ಕಾಯಿದೆಯ ಪ್ರಕಾರ, ಸರ್ಕಾರವು ಸ್ವಾಧೀನಾನುಭವ ಪ್ರಮಾಣಪತ್ರದಿಂದ ವಿನಾಯಿತಿ ನೀಡಬಹುದಾದ ಕಟ್ಟಡಗಳ ವರ್ಗವನ್ನು ತಿಳಿಸಲು ಅವಕಾಶವಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ334 ಎಂಎನ್ಯು 2025 ಬೆಂಗಳೂರು ದಿನಾಂಕ: 0909.2025 ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

1) ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಕಲಂ241(7)ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರದನ್ವಯ, 1200 ಚ.ಅಡಿ ವಿಸ್ತೀರ್ಣದವರೆಗಿನ ನಿವೇಶನಗಳಲ್ಲಿ, ನಕ್ಷೆ ಮಂಜೂರಾತಿ ಪಡೆದು ನಿರ್ಮಿಸುವ ನೆಲ+2 ಅಂತಸ್ತು ಅಥವಾ Stilt+3 ಅಂತಸ್ತಿನವರೆಗಿನ ವಾಸದ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ occupancy certificate) ಪಡೆಯುವುದರಿಂದ ವಿನಾಯಿತಿ ನೀಡಿ ಆದೇಶಿಸಿದೆ.

2) ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಅಧ್ಯಾಯ 7ರ ನಿಬಂಧನೆಗಳನ್ನಯ ಕಟ್ಟಡ ಮತ್ತು ನಗರ ಯೋಜನಾ ನಿಯಮಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆಗಳನ್ನು ಕಾರ್ಯಗತಗೊಳಿಸಲು ಲಭ್ಯವಿರುವ ಕಾರ್ಯಪಡೆಯೊಂದಿಗೆ ದೃಢವಾದ ಆಡಳಿತ ರಚನೆಯನ್ನು ವಿನ್ಯಾಸಗೊಳಿಸುವಂತೆ ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರದವರಿಗೆ ನಿರ್ದೇಶಿಸಿದೆ.

ಈ ಆದೇಶವನ್ನು ಹೊರಡಿಸಲು ಹಲವಾರು ಅಂಶಗಳನ್ನು ಪರಿಗಣಿಸಲಾಗಿದೆ ಎಂದು ಸರ್ಕಾರದ ನಡವಳಿಯಲ್ಲಿ ಉಲ್ಲೇಖಿಸ ಲಾಗಿದೆ. ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ ಪ್ರಕ್ರಿಯೆಯಲ್ಲಿ ಸ್ಥಳ ಪರಿಶೀಲನೆ ಮತ್ತು ಕಟ್ಟಡ ನಕ್ಷೆಯ ತುಲನಾತ್ಮಕ ಪರಿಶೀಲನೆ ಯಂತಹ ಕಾರ್ಯಗಳು ಒಳಗೊಂಡಿದ್ದು, ಇದು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ಮೇಲೆ ಹೆಚ್ಚಿನ ಕೆಲಸದ ಹೊರೆಯನ್ನು ಹೆಚ್ಚಿಸುತ್ತಿದೆ. ಇದರಿಂದಾಗಿ ಸಾರ್ವಜನಿಕರಿಗೆ ಸೇವೆ ನೀಡುವಲ್ಲಿ ವಿಳಂಬವಾಗುವ ಸಾಧ್ಯತೆಗಳಿದ್ದು, ಇದನ್ನು ತಪ್ಪಿಸಲು ಈ ವಿನಾಯಿತಿ ನೀಡಲಾಗಿದೆ.

ಸಣ್ಣ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಕಡ್ಡಾಯಗೊಳಿಸುವುದರಿಂದ ವಿನಾಯಿತಿ ನೀಡುವುದು ಸೂಕ್ತ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಅಭಿಪ್ರಾಯಪಟ್ಟಿದ್ದರು. ಅಲ್ಲದೆ, 'ನಂಬಿಕೆ ನಕ್ಷೆ' (Automated Online Software) ವ್ಯವಸ್ಥೆಯಡಿ ಕಟ್ಟಡ ನಕ್ಷೆಗಳ ಮಂಜೂರಾತಿ ಪ್ರಕ್ರಿಯೆಯನ್ನು ಈಗಾಗಲೇ ಪಾರದರ್ಶಕವಾಗಿ ಮತ್ತು ಕಾಲಮಿತಿಯೊಳಗೆ ನಡೆಸಲಾಗುತ್ತಿದೆ.

ಪ್ರತಿ ವರ್ಷ 1200 ಚದರ ಅಡಿಗಿಂತ ಕಡಿಮೆ ವಿಸ್ತೀರ್ಣದ ಸುಮಾರು 4,000 ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ನೀಡಲಾಗುತ್ತದೆ. ಈ ಮಹತ್ವದ ಆದೇಶವು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಧಾರದ ಅನ್ವಯ ಹೊರಬಿದ್ದಿದೆ. ಸಾರ್ವಜನಿಕರಿಗೆ ಸಕಾಲದಲ್ಲಿ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಸರ್ಕಾರ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಇಲಾಖೆಯು ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದರೂ, ಇದು ಎಷ್ಟರ ಮಟ್ಟಿಗೆ ನಾಗರಿಕರ ಹಾಗೂ ಬೆಂಗಳೂರಿನ ಜನಕ್ಕೆ ಅನು ಕೂಲವಾಗುವುದೆಂದು ಕಾದು ನೋಡಬೇಕಿದೆ.

# ಡಿಜಿಲಾಕರ್
# ಭಾರತ ಸರ್ಕಾರದ ವಿನೂತನ ಯೋಜನೆ ಡಿಜಿಟಲ್ ಇಂಡಿಯಾದ ಭರ್ಜರಿ ಮೈಲುಗಲ್ಲು: ಇ–ಡಿಸ್ಟಿಕ್ಸ್ ವೇದಿಕೆಗಳಲ್ಲಿ 2000 ಸರ್ಕಾರಿ ಸೇವೆಗಳು ಲಭ್ಯ




**ರಾಜ್ಯಗಳ ಪೈಕಿ ಕರ್ನಾಟಕಕ್ಕೆ ಮೂರನೇ ಸ್ಥಾನ, 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಾಗರಿಕರಿಗೆ ಎಲ್ಲಾ ಸರ್ಕಾರಿ ಸೌಲಭ್ಯಗಳು ಬೆರಳ ತುದಿಯಲ್ಲಿ ಸಿಗುವಂತೆ ತಲುಪಿಸಲು ಇಡಿಸ್ಟಿಕ್ಸ್, ಡಿಜಿಲಾಕರ್ ಜಾಲತಾಣ ಗಳಲ್ಲಿ ಲಭ್ಯವಾಗುವಂತೆ ರುಪಿಸಲಾಗಿದೆ.**

ಭಾರತವನ್ನು ಡಿಜಿಟಲ್ ಸಶಕ್ತ ಸಮಾಜ ಮತ್ತು ಜ್ಞಾನ ಆರ್ಥಿಕತೆಯನ್ನಾಗಿ ಪರಿವರ್ತಿಸುವ ಗುರಿಯನ್ನು ಹೊಂದಿರುವ 'ಡಿಜಿಟಲ್ ಇಂಡಿಯಾ' ಕಾರ್ಯಕ್ರಮವು ಮತ್ತೊಂದು ಪ್ರಮುಖ ಮೈಲಿಗಲ್ಲು ಸಾಧಿಸಿದೆ.

ಭಾರತ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ (MeitY) ಅಡಿಯಲ್ಲಿ ಬರುವ ರಾಷ್ಟ್ರೀಯ ಇ–ಆಡಳಿತ ವಿಭಾಗ (NeGD), ಡಿಜಿಲಾಕರ್ ಮತ್ತು ಇ–ಡಿಸ್ಟ್ರಿಕ್ಟ್ ವೇದಿಕೆಗಳಲ್ಲಿ ದೇಶಾದ್ಯಂತ 2,000 ಇ–ಸರ್ಕಾರಿ ಸೇವೆಗಳನ್ನು ಯಶಸ್ವಿಯಾಗಿ ಸಂಯೋಜಿಸಿದೆ. ಈ ಹೆಜ್ಜೆಯೊಂದಿಗೆ, ದೇಶದ ಎಲ್ಲ 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ನಾಗರಿಕರಿಗೆ ಇನ್ನು ಮುಂದೆ ಯಾವುದೇ ಸಮಯದಲ್ಲಿ ಯಾವುದೇ ಸ್ಥಳದಲ್ಲಿ ಈ ಸೇವೆಗಳು ಸುಲಭವಾಗಿ ಲಭ್ಯವಾಗಲಿವೆ.

ಕೇಂದ್ರ ಸರ್ಕಾರ ನೀಡಿದ ಮಾಹಿತಿಯ ಪ್ರಕಾರ, ಪ್ರಮಾಣ ಪತ್ರಗಳು, ಕಲ್ಯಾಣ ಯೋಜನೆಗಳು, ಯುಟಿಲಿಟಿ ಪಾವತಿಗಳು ಮತ್ತು ಇತರ ಅಗತ್ಯ ಸೌಲಭ್ಯಗಳು ಸೇರಿದಂತೆ ವ್ಯಾಪಕ ಶ್ರೇಣಿಯ ಸೇವೆಗಳನ್ನು ಈ ಏಕೀಕರಣವು ಒಳಗೊಂಡಿದೆ. ಇದು ಸರ್ಕಾರದ ಸೇವೆಗಳನ್ನು ಹೆಚ್ಚು ಪರಿಣಾಮಕಾರಿ, ಪಾರದರ್ಶಕ ಮತ್ತು ಸುಗಮವಾಗಿ ಪಡೆಯಲು ನಾಗರಿಕರಿಗೆ ಸಹಾಯ ಮಾಡುತ್ತದೆ. ಈ ಬೆಳವಣಿಗೆಯು ಕಾಗದ ರಹಿತ ಮತ್ತು ಮೊಬೈಲ್–ಆಧಾರಿತ ಆಡಳಿತದ ಗುರಿಯನ್ನು ಸಾಧಿಸುವಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ಅಲ್ಲದೆ, ಇದು ನೇರವಾಗಿ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ (Unified Developments) ಕೊಡುಗೆ ನೀಡುತ್ತದೆ.

ಡಿಜಿಲಾಕರ್ ಮತ್ತು ಇ–ಡಿಸ್ಟ್ರಿಕ್ಟ್ ಪ್ಲಾಟ್ ಫಾರ್ಮ್‌ಗಳಲ್ಲಿ ಹೆಚ್ಚು ಸೇವೆಗಳನ್ನು ಒದಗಿಸಿದ ರಾಜ್ಯಗಳ ಪೈಕಿ ಕರ್ನಾಟಕವು ಪ್ರಶಂಸನೀಯ ಮೂರನೇ ಸ್ಥಾನವನ್ನು ಗಳಿಸಿದೆ. ಮಹಾರಾಷ್ಟ್ರ (254 ಸೇವೆಗಳು) ದೇಶದಲ್ಲೇ ಮೊದಲ ಸ್ಥಾನದಲ್ಲಿದ್ದರೆ, ದೆಹಲಿ (123) ಎರಡನೇ ಸ್ಥಾನದಲ್ಲಿದೆ. ನಮ್ಮ ಕರ್ನಾಟಕ ರಾಜ್ಯವು 113 ಸೇವೆಗಳನ್ನು ನಾಗರಿಕರಿಗೆ ಲಭ್ಯವಾಗಿಸುವ ಮೂಲಕ ಅಗ್ರ ಐದು ರಾಜ್ಯಗಳ ಪಟ್ಟಿಯಲ್ಲಿ ಸೇರಿಕೊಂಡಿದೆ. ಅಸ್ಸಾಂ (102) ಮತ್ತು ಉತ್ತರ ಪ್ರದೇಶ (86) ನಂತರದ ಸ್ಥಾನಗಳಲ್ಲಿವೆ. ಈ ಅಂಕಿಅಂಶಗಳು ರಾಜ್ಯಗಳಲ್ಲಿ ಡಿಜಿಟಲ್ ಆಡಳಿತದ ಬೆಳವಣಿಗೆಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆ.


**ಡಿಜಿಲಾಕರ್:** ಡಿಜಿಟಲ್ ಮೂಲ ಸೌಕರ್ಯದ ಬೆನ್ನೆಲುಬಾಗಿ ಅಭಿವೃದ್ಧಿ ಹೊಂದಿದ್ದರು ಸಾರ್ವಜನಿಕರಿಗೆ ಇದೊಂದು ವೈಯಕ್ತಿಕ ಮಾಹಿತಿಯ ಬ್ಯಾಂಕ್ ಇದ್ದಂತೆ ಇಲ್ಲಿ ಸಾರ್ವಜನಿಕರು ತಮ್ಮ ವೈಯಕ್ತಿಕ ಮತ್ತು ಸರ್ಕಾರ ಪ್ರಮಾಣಿಕೃತ ಪ್ರಮಾಣ ಪತ್ರಗಳನ್ನು ದಾಸ್ತುನು ಮಾಡಿ, ಬೇಕೆಂದಾಗ ಯಾವುದೇ ಸ್ಥಳದಲ್ಲಿ ಎಲ್ಲಿ ಬೇಕಾದರು ಉಪಯೋಗಿಸಲು ತೆರೆದುಕೊಳ್ಳುವಂತೆ ರೂಪಿಸಲಾಗಿದೆ.

ಡಿಜಿಲಾಕರ್ ಅನ್ನು ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದ ಪ್ರಮುಖ ಆಧಾರಸ್ತಂಭವೆಂದು ಪರಿಗಣಿಸಲಾಗಿದೆ. ಇದು ದತ್ತಾಂಶ ಭದ್ರತೆ, ಪರಸ್ಪರ ಕಾರ್ಯಸಾಧ್ಯತೆ ಮತ್ತು ಬಹು–ಪಾಲುದಾರರ ಸಮನ್ವಯದ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಿದೆ. ಇದು ನಾಗರಿಕರು ಅಧಿಕೃತ ದಾಖಲೆಗಳನ್ನು ಸುರಕ್ಷಿತವಾಗಿ ಸಂಗ್ರಹಿಸಲು ಮತ್ತು ಹಂಚಿಕೊಳ್ಳಲು ಅನುವು ಮಾಡಿಕೊಟ್ಟಿದೆ. ಈ ಯಶಸ್ಸಿನ ಮೇಲೆ, ರಾಷ್ಟ್ರೀಯ ಇ–ಆಡಳಿತ ವಿಭಾಗ ಭವಿಷ್ಯದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ತಂತ್ರಜ್ಞಾನಗಳ ಮೂಲಕ ಇ–ಸರ್ಕಾರಿ ಸೇವೆಗಳ ಪೋರ್ಟ್‌ಫೋಲಿಯೊವನ್ನು ಮತ್ತಷ್ಟು ವಿಸ್ತರಿಸುವ ಯೋಜನೆಯನ್ನು ಹೊಂದಿದೆ.

ಈ ಯೋಜನೆಯು ಕಾಗದದ ದಾಖಲೆಗಳನ್ನು ಹೊತ್ತೊಯ್ಯುವ ಅಗತ್ಯವನ್ನು ಸಂಪೂರ್ಣವಾಗಿ ತೆಗೆದು ಹಾಕುವುದಲ್ಲದೆ, ಮಧ್ಯವರ್ತಿಗಳ ಹಾವಳಿಯನ್ನು ತಡೆಯುವ ಮೂಲಕ ಮತ್ತು ಆಡಳಿತ ಪ್ರಕ್ರಿಯೆಗಳನ್ನು ಹೆಚ್ಚು ಪಾರದರ್ಶಕಗೊಳಿಸುವ ಮೂಲಕ ಭ್ರಷ್ಟಾಚಾರವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂಬುದು ಸಾಬೀತಾಗಿದೆ.

ನಾಗರಿಕರು ತಮ್ಮ ಅಧಿಕೃತ ದಾಖಲೆಗಳಾದ ಆಧಾರ್, ಪಾನ್‌ಕಾರ್ಡ್, ಚಾಲನಾ ಪರವಾನಗಿ, ಶೈಕ್ಷಣಿಕ ಪ್ರಮಾಣ ಪತ್ರಗಳು, ಮತ್ತು ಇನ್ನಿತರ ಸರ್ಕಾರಿ ದಾಖಲೆಗಳನ್ನು ಸುರಕ್ಷಿತವಾಗಿ ಡಿಜಿಲಾಕರ್‌ನಲ್ಲಿ ಸಂಗ್ರಹಿಸಬಹುದಾಗಿದೆ. ಜೊತೆಗೆ, ಅಗತ್ಯವಿದ್ದಾಗ ಅವುಗಳನ್ನು ಅಧಿಕೃತವಾಗಿ ಬಳಸಬಹುದಾಗಿದೆ.

# ಬಳ್ಳಾರಿ ಇತಿಹಾಸ ಪತ್ತೆ ಮಾಡಿದ್ದ ಭೂವಿಜ್ಞಾನಿ ರಾಬರ್ಟ್ ಬ್ರೂಸ್ಫೂಟ್



**ಪ್ರ**ತಿ ವರ್ಷ ಏಪ್ರಿಲ್ ಮೊದಲ ಭಾನುವಾರವನ್ನು ವಿಶ್ವದಾದ್ಯಂತ 'ಭೂವಿಜ್ಞಾನಿ'ಗಳ ದಿನವಾಗಿ ಆಚರಿಸಲಾಗುತ್ತದೆ. ಅವರ ಸಾಧನೆ ಗೌರವಿಸುವುದು ಈ ದಿನದ ವಿಶೇಷ ಈ ದಿನ ಇಡೀ ದಕ್ಷಿಣ ಭಾರತ, ಆದರಲ್ಲೂ ಬಳ್ಳಾರಿ ಜಿಲ್ಲೆ ಸ್ಮರಿಸಬೇಕಾದದ್ದು ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಭೂವಿಜ್ಞಾನಿಯಾಗಿದ್ದ ರಾಬರ್ಟ್ ಬ್ರೂಸ್‌ಫೂಟ್ ಅವರನ್ನು, ರಾಬರ್ಟ್ ಬ್ರೂಸ್‌ಫೂಟ್ ದಕ್ಷಿಣ ಭೂವಿಜ್ಞಾನದ ಪಿತಾಮಹಾ, ಅವರನ್ನು ಭಾರತದ ಪ್ರಾಗೈತಿಹಾಸಿಕ ಅಧ್ಯಯನದ ಪಿತಾಮಹಾ ಎಂದೂ ಕರೆಯಲಾಗುತ್ತದೆ.

1894ರಲ್ಲಿ ಮೈಸೂರು ಮಹಾರಾಜರು ಬೆಂಗಳೂರಿನಲ್ಲಿ ಮೈಸೂರು ಭೂ ವಿಜ್ಞಾನ' ಇಲಾಖೆ ಆರಂಭಿಸಿದರು. ಅದರ ಮೊದಲ ಮುಖ್ಯಸ್ಥರಾಗಿದ್ದವರು ಬ್ರೂಸ್ಫೂಟ್, ಈ ಇಲಾಖೆ ಇಂದು 'ಗಣಿ ಮತ್ತು ಭೂವಿಜ್ಞಾನ ಇಲಾಖೆ'ಯಾಗಿ ಕಾರ್ಯನಿರ್ವಹಿಸುತ್ತಿದೆ. 1834ರ ಸೆ.22ರಂದು ಇಂಗ್ಲೆಂಡ್‌ನಲ್ಲಿ ಜನಿಸಿದ ಬ್ರೂಸ್‌ಫೂಟ್ 1858ರಲ್ಲಿ ಭಾರತೀಯ ಭೂವಿಜ್ಞಾನ (ಜಿಎಸ್ಐ) ಇಲಾಖೆಗೆ ಸೇರಿದ್ದರು. ಅವರನ್ನು ಮದ್ರಾಸ್ಗೆ ನಿಯೋಜಿಸಲಾಗಿತ್ತು. 1870ರಲ್ಲಿ ಕೆಲಕಾಲ ಬಳ್ಳಾರಿಯಲ್ಲೇ ನೆಲೆಸಿದ್ದರು. ಬಳಿಕ ಮದ್ರಾಸ್‌ಗೆ ಸ್ಥಳಾಂತರಗೊಂಡರು. 1880 ರಲ್ಲಿ ಮತ್ತೆ ಬಳ್ಳಾರಿಗೆ ಮರಳಿದ ಅವರು ಭೂವಿಜ್ಞಾನ ಸಮೀಕ್ಷೆ ಮತ್ತು ಪ್ರಾಗೈತಿಹಾಸಿಕ ಅಧ್ಯಯನದಲ್ಲಿ ತೊಡಗಿದ್ದರು ಎನ್ನಲಾಗಿದೆ. ಬಳ್ಳಾರಿ ಸೇರಿದ ಭಾರತದಂತೆ ರಾಯಲಸೀಮಾ, ಕಲ್ಯಾಣ ಕರ್ನಾಟಕ ಮತ್ತು ಮದ್ರಾಸ್ ಪ್ರಾಂತ್ಯದಲ್ಲಿ ವ್ಯಾಪಕವಾದ ಭೂವಿಜ್ಞಾನ ಸಮೀಕ್ಷೆಗಳನ್ನು ಅವರು ನಡೆಸಿದ್ದರು. ಭೂ ವೈಜ್ಞಾನಿಕ ರಚನೆ ಗುರುತಿಸಿ, ಉತ್ಖನನ ಮಾಡಿದ್ದರು. ದಕ್ಷಿಣ ಭಾರತದ ಚಿನ್ನ ಹೊಂದಿರುವ ಶಿಲೆಗಳನ್ನು ಮೊದಲು ಪತ್ತೆ ಮಾಡಿದವರು ಇವರೇ. ಹರಪನಹಳ್ಳಿಯ ಚಿಗಟೇರಿಯಲ್ಲಿ ಚಿನ್ನವನ್ನು ಪ್ರತ್ಯೇಕಗೊಳಿಸುವ ಗೋಲ್ಡ್–ವಾಷಿಂಗ್' (ಮಣ್ಣಿನಿಂದ ಚಿನ್ನ ತೆಗೆಯುವ ಪ್ರಕ್ರಿಯೆ) ತಾಣವಾಗಿತ್ತು ಎಂಬುದನ್ನು ತಮ್ಮ 'ಮೆಮೊರಿಸ್ ಆಫ್ ದಿ ಜಿಯಲಾಜಿಕಲ್ ಸರ್ವೆ ಆಫ್ ಇಂಡಿಯಾದಲ್ಲಿ' ದಾಖಲಿಸಿದ್ದಾರೆ.

ಪ್ರಾಕ್ತನಶಾಸ್ತ್ರದ ಜ್ಞಾನ ಹೊಂದಿದ್ದ ಬ್ರೂಸ್ ಫೂಟ್, ದಕ್ಷಿಣ ಭಾರತದ ಇತಿಹಾಸಪೂರ್ವ ನೆಲೆಗಳನ್ನು ಗುರುತಿಸಿದರು. ಬಳ್ಳಾರಿಯ ಕಪ್ಪಗಲ್ಲು, ಸಂಗನಕಲ್ಲು ಗುಡ್ಡಗಿಗಳಲ್ಲಿ ಆದಿ ಮಾನವರ ಹೆಜ್ಜೆಗುರುತು ಪತ್ತೆ ಹಚ್ಚಿ ಕುಡುತಿನಿಯ ಬೂದಿ ದಿಬ್ಬಗಳನ್ನು ಗುರುತಿಸಿದರು. ಇಲ್ಲಿನ ಪೂರ್ವ–ಐತಿಹಾಸದ ಕಬ್ಬಿಣ ಕರಗಿಸುವ ಉದ್ಯಮದ ಕೆಲವು ಕುರುಹುಗಳನ್ನು ಕಂಡು ಹಿಡಿದಿದ್ದರು. ಈ ಮೂಲಕ ಬಳ್ಳಾರಿ ಸಾವಿರಾರು ವರ್ಷಗಳ ಇತಿಹಾಸ ಹೊಂದಿದೆ ಎಂಬುದನ್ನು ಸಾಬೀತು ಪಡಿಸಿದರು. ಬಳ್ಳಾರಿ ಜಿಲ್ಲೆಯಲ್ಲಿ 77 ಪೂರ್ವ ಇತಿಹಾಸ ತಾಣಗಳಿರುವುದಾಗಿ, ಅವುಗಳಲ್ಲಿ 36 ಮುಖ್ಯವಾದವು ಎಂದು ಅವರು ದಾಖಲಿಸಿದ್ದಾರೆ. 'ನಾನು ಸಮೀಕ್ಷೆ ಮಾಡಿದ ಆದಿಮಾನವರ ನೆಲೆಗಳಲ್ಲೇ ಬಳ್ಳಾರಿ ಜಿಲ್ಲೆಯ ನೆಲೆಗಳು ಅತ್ಯಂತ ಶ್ರೀಮಂತ ಎಂದು ಬ್ರೂಸ್ಫೂಟ್ ಬಣ್ಣಿಸಿದ್ದರು. ಫೂಟ್ ಕಲೆಕ್ಷನ್ ಆಫ್ ಇಂಡಿಯನ್ ಪ್ರಿ–ಹಿಸ್ಟೋರಿಕ್ ಅಂಡ್ ಪ್ರೊ. ಟೊ ಹಿಸ್ಟೋರಿಕ್ ಆಕ್ಟಿವಿಟೀಸ್' ಪುಸ್ತಕದಲ್ಲಿ ಈ ಕುರಿತ ಉಲ್ಲೇಖವಿದೆ.

ಬಳ್ಳಾರಿಯಲ್ಲಿನ ಪ್ರಾಗೈತಿಹಾಸಿಕ ತಾಣಗಳಲ್ಲಿ ಪತ್ತೆಯಾದ ಪಳೆಯುಳಿಕೆಗಳ ರಕ್ಷಣೆ ಮತ್ತು ಜಿಲ್ಲೆಯ ಪೂರ್ವ ಇತಿಹಾಸದ ಕುರಿತು ಮಾಹಿತಿ ನೀಡಲೆಂದೇ ಬಳ್ಳಾರಿ ನಗರದಲ್ಲಿ ಜಿಲ್ಲಾಡಳಿತ, ಪ್ರೊ. ರವಿ ಕೋರಿಶೆಟ್ಟರ್. ಇತಿಹಾಸಜ್ಞರು, ಆಸಕ್ತರು ಸೇರಿ ಪ್ರಾಗೈತಿಹಾಸಿಕ ಸಂಗ್ರಹಾಲಯ ಸ್ಥಾಪಿಸಿದ್ದು, ಅದಕ್ಕೆ ರಾಬರ್ಟ್ ಬ್ರೂಸ್‌ಫೂಟ್ ಹೆಸರಿಡಲಾಗಿದೆ.

ಪ್ರೊ. ರವಿಕೋರಿಶೆಟ್ಟರ್ ಸಂಶೋಧಕ ಪ್ರಾಕ್ತನಶಾಸ್ತ್ರ ಜ್ಞರಾಬರ್ಟ್ ಬ್ರೂಸ್‌ಫೂಟ್ ಭೂವಿಜ್ಞಾನಿಯಾಗಿದ್ದರೂ ಪ್ರಾಕ್ತನಶಾಸ್ತ್ರದ ಬಗ್ಗೆ ಆಸಕ್ತಿ ಹೊಂದಿದ್ದರು. ಹೀಗಾಗಿ ಎರಡರಲ್ಲೂ ಸಾಧನೆ ಮಾಡಲು ಸಾಧ್ಯವಾಯಿತು. ಇಂದಿಗೂ ನೀವು ಬಳ್ಳಾರಿಗೆ ಭೇಟಿ ಕೊಟ್ಟಾಗ ಈ ಇತಿಹಾಸ ಪ್ರಸಿದ್ಧ ಮತ್ತು ಮಹತ್ವದ ಹೆಗ್ಗುರುತು ನೋಡಬಹುದಾಗಿರುತ್ತದೆ. ಇದು ಪ್ರಪಂಚ ಇತಿಹಾಸದ ಮೈಲುಗಲ್ಲೆಂದು ಸದಾ ನೆನಪಿನಲ್ಲಿಡುವಂತದ್ದು.

# ಬಿಡಿಎ ಬೆಂಗಳೂರು ಮಹಾಯೋಜನೆ 2041




ಹಿಂದೆ ಸಿದ್ಧಪಡಿಸಿದ್ದ ಆರ್‌ಎಂಪಿ–2031 ಯೋಜನೆಯು ವೈಜ್ಞಾನಿಕ ಆಧಾರಗಳ ಕೊರತೆ, ಸಮರ್ಪಕ ಪಾಲುದಾರರ ಸಹಭಾಗಿತ್ವವಿಲ್ಲದ ಮತ್ತು ಅಸ್ತವ್ಯಸ್ತ ನಗರ ಬೆಳವಣಿಗೆಯನ್ನು ನಿಯಂತ್ರಿಸಲು ವಿಫಲವಾದ ಕಾರಣ ಆ ಪರಿಷ್ಕೃತ ಯೋಜನೆಯನ್ನು ಸರ್ಕಾರ ಕೈಬಿಟ್ಟಿತ್ತು. ಈ ಹಿನ್ನೆಲೆಯಲ್ಲಿ ಪರಿಷ್ಕೃತ ಮಹಾಯೋಜನೆಗೆ ಬಿಡಿಎ ಮುಂದಾಗಿದೆ. ಹೊಸ ಯೋಜನೆಯು ಹಿಂದಿನ ನ್ಯೂನ್ಯತೆಗಳನ್ನು ಸರಿಪಡಿಸುವುದು ಮಾತ್ರವಲ್ಲದೆ, ಬೆಂಗಳೂರಿನ ಹೆಚ್ಚುತ್ತಿರುವ ಜನಸಂಖ್ಯೆ, ವಾಹನ ದಟ್ಟಣೆ ಮತ್ತು ನಗರ ಹರಡುವಿಕೆಯನ್ನು ಸಮರ್ಪಕವಾಗಿ ನಿರ್ವಹಿ ಸಲು ಒಂದು ದೃಢವಾದ ಅಡಿಪಾಯ ಹಾಕಲಿದೆ ಎಂದು ಬಿಡಿಎ ಅಧಿಕಾರಿಗಳು ಹೇಳಿದ್ದಾರೆ.

ಪರಿಷ್ಕೃತ ಯೋಜನಾ ಕಾರ್ಯಗಳ ಭಾಗವಾಗಿ, ಈಗಾಗಲೇ ಹಿಂದಿನ ಟೆಂಡರ್ ಅಡಿಯಲ್ಲಿ ನಗರದ 1,240 ಚದರ ಕಿ.ಮೀ. ಪ್ರದೇಶದ ಹೈಟೆಕ್ 3ಆ ಡ್ರೋನ್ ಸಮೀಕ್ಷೆ ಯ ಪೈಕಿ, ಈಗಾಗಲೇ ಕರ್ನಾಟಕ ರಾಜ್ಯ ರಿಮೋಟ್ ಸೆನ್ಸಿಂಗ್ ಅಪ್ಲಿಕೇಶನ್ ಸೆಂಟರ್ (KSRSAC–ಕ್ಯಾಸ್ ರಾಕ್ ಬಿಬಿಎಂಪಿ ವ್ಯಾಪ್ತಿಯಲ್ಲಿ (800 ಚದರ ಕಿ.ಮೀ) ಈಗಾಗಲೇ 3ಆ ಡೋನ್ ಸರ್ವೆ ಪೂರ್ಣಗೊಳಿಸಿದೆ. ಉಳಿದ ಬಿಡಿಎ ವ್ಯಾಪ್ತಿಯ (440 ಚದರ ಕಿ.ಮೀ) ಪ್ರದೇಶಗಳಲ್ಲಿ ಸಮೀಕ್ಷೆ ನಡೆಯಬೇಕಿದೆ.

ಈ ಡ್ರೋನ್ ಸಮೀಕ್ಷೆಯು ಮಹಾ ಯೋಜನೆಯನ್ನು ಸಿದ್ಧಪಡಿಸಲು ಅವಶ್ಯಕವಾಗಿರುವ ಬೇಸ್ ಮ್ಯಾಪ್, ಭೂ ಬಳಕೆ ನಕ್ಷೆ, ಆರ್ಥೋ–ರೆಕ್ಟಿಫೈಡ್ ಚಿತ್ರಗಳು ಮತ್ತು ಡಿಜಿಟಲ್ ಎಲಿವೇಶನ್ ಮಾಡೆಲ್‌ಗಳಂತಹ ಪ್ರಮುಖ ಮಾಹಿತಿಯನ್ನು ಒದಗಿಸಲಿದೆ. ಬೆಂಗಳೂರಿನ ಕೊನೆಯ ಅನುಮೋದಿತ ಮಾಸ್ಟರ್ ಪ್ಲಾನ್ ಆರ್‌ಎಂಪಿ 2015ನ್ನು 2005ರಲ್ಲಿ ಸಿದ್ಧಪಡಿಸಲಾಗಿತ್ತು.

ಅದಕ್ಕೂ ಮಿಗಿಲಾಗಿ, ಮುಂಬರುವ ಆರ್‌ಎಂಪಿ 2041 ಯೋಜನೆಯು ದತ್ತಾಂಶ ಆಧಾರಿತ, ಎಲ್ಲರನ್ನೂ ಒಳಗೊಳ್ಳುವ ಮತ್ತು ಭವಿಷ್ಯದ ಸವಾಲುಗಳಿಗೆ ಸಿದ್ಧವಿರುವ ಯೋಜನೆಯಾಗಿರುತ್ತದೆ. ವಾಸ್ತವವಾಗಿ ಈ ಡ್ರೋನ್ ಸಮೀಕ್ಷೆಯನ್ನು ಕರ್ನಾಟಕ ರಾಜ್ಯ ರಿಮೋಟ್ ಸೆನ್ಸಿಂಗ್ ಅಪ್ಲಿಕೇಶನ್ ಸೆಂಟರ್ ನಡೆಸಬೇಕಿತ್ತು. ಆದರೆ, ರಾಜ್ಯ ಸರ್ಕಾರ ಬದಲಾದ ಹಿನ್ನೆಲೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಹೆಚ್ಚಿನ ದಕ್ಷತೆಗಾಗಿ ಈ ಯೋಜನೆಯನ್ನು ಜಾಗತಿಕ ಟೆಂಡರ್ ಮೂಲಕ ಖಾಸಗಿ ಸಂಸ್ಥೆಗಳಿಗೆ ತೆರೆಯಲು ಬಿಡಿಎ ನಿರ್ಧರಿಸಿದೆ.

ಬಿಡಿಎಯ ನಗರ ಯೋಜನೆ ಸದಸ್ಯ ಎಲ್. ಶಶಿಕುಮಾರ್ ಮಾತನಾಡಿ, "ಈ ಯೋಜನೆಯನ್ನು ಸಮಗ್ರವಾಗಿ ರೂಪಿಸಲು ಕೃಷಿ, ವಸತಿ, ವಾಣಿಜ್ಯ ಪ್ರದೇಶಗಳು ಮತ್ತು ರೆವೆನ್ಯೂ ಜಮೀನುಗಳ ಬಗ್ಗೆ ನಮಗೆ ವಿವರವಾದ ಮೌಲ್ಯಮಾಪನಗಳು ಬೇಕಾಗಿವೆ. ಆರ್‌ಎಂಪಿ 2041 ಯೋಜನೆಯು ಪಾಲುದಾರರೊಂದಿಗೆ ಸವಾಲೋಚನೆ, ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಮತ್ತು ಪ್ರತಿಕ್ರಿಯೆ ಆಧರಿಸಿ ಪರಿಷ್ಕರಣೆ ಸೇರಿದಂತೆ ಹಲವು ಹಂತಗಳನ್ನು ಒಳಗೊಂಡಿದೆ. ಮೂಲ ನಕ್ಷೆ ಬಹುತೇಕ ಸಿದ್ಧವಾಗಿದೆ. ಈಗ ನಾವು ವಿವರವಾದ ಭೂ ಬಳಕೆ ನಕ್ಷೆಗಳನ್ನು ಸಿದ್ಧಪಡಿಸಬೇಕು ಮತ್ತು ವಿಸ್ತರಿತ ಹಸಿರು ಪ್ರದೇಶಗಳು, ಹೊಸ ರಸ್ತೆ ಜಾಲಗಳು ಮತ್ತು ಸಾರಿಗೆ ಆಧಾರಿತ ನೀತಿಯಂತಹ ವೈಶಿಷ್ಟ್ಯಗಳನ್ನು ಸಂಯೋಜಿಸಬೇಕಾಗಿದೆ" ಎಂದರು.

ಕರಡು ಯೋಜನೆ ಸಿದ್ಧವಾದ ನಂತರ ಅದನ್ನು ಗೆಜೆಟ್‌ನಲ್ಲಿ ಪ್ರಕಟಿಸಲಾಗುವುದು. ಸಾರ್ವಜನಿಕರಿಗೆ ಸಲಹೆ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು 60 ದಿನಗಳ ಕಾಲಾವಕಾಶ ನೀಡಲಾಗುತ್ತದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿ, ಅವುಗಳನ್ನು ಅಂತಿಮ ಯೋಜನೆಯಲ್ಲಿ ಸೇರಿಸಲಾಗುತ್ತದೆ. "ನಾವು ಸಂಪೂರ್ಣ ಪ್ರಕ್ರಿಯೆಯನ್ನು 2026ರ ಮಧ್ಯಭಾಗದ ವೇಳೆಗೆ ಪೂರ್ಣಗೊಳಿಸುವ ಗುರಿ ಹೊಂದಿದ್ದೇವೆ" ಎಂದು ಶಶಿಕುಮಾರ್ ಬಿಡಿಎ ಅಧಿಕಾರಿಗಳು ಸ್ಪಷ್ಟಪಡಿಸಿದರು.

# ನೀವು ತಿಂಡಿ ಪ್ರಿಯರ? ಬೆಂಗಳೂರಿಗೆ ಬರ್ತಿದ್ದೀರಾ? ಹಾಗಾದ್ರೆ ಈ 7 ಫೇಮಸ್ ಬೇಕರಿಗಳನ್ನು ಮಿಸ್‌ಮಾಡ್ಬೇಡಿ!

ಬೆಂಗಳೂರು ನಗರವು ತಂತ್ರಜ್ಞಾನ ನಗರಿಯಾಗಿರುವಷ್ಟೇ ಆಹಾರ ಪ್ರಿಯರಿಗೂ ಹವ್ಯಾಶಿ ತಾಣವಾಗಿದೆ. ಇಲ್ಲಿ ಕಾಫಿ, ಕೇಕ್, ದೋಸೆ ಎಲ್ಲವೂ ಸಿಗುತ್ತೆ. ಆದರೆ, ಒಂದು ವಿಶಿಷ್ಟ ಅನುಭವ ಅಂದ್ರೆ ಅಯ್ಯಂಗಾರ್ ಶೈಲಿಯ ಬೇಕರಿಗಳಲ್ಲಿ ಸಿಗುವ ಪಫ್, ಬನ್, ಹನಿ ಕೇಕ್‌ಗಳ ರುಚಿ, ಸಿಟಿಗೆ ಭೇಟಿ ನೀಡುವ ಪ್ರವಾಸಿಗರು ಇಲ್ಲಿ ಕೇವಲ ಸೈಟ್‌ಸೀಯಿಂಗ್ ಮಾತ್ರವಲ್ಲ, ಈ ಹಳೆಯ ಶೈಲಿಯ ಬೇಕರಿಗಳ ಟೇಸ್ಟ್ ಮಾಡೋಕು ಬರ್ತಾರೆ.



**ಜಯನಗರದ ಐಯ್ಯಂಗಾರ್ ಬೇಕರಿ**

ಜಯನಗರ 4ನೇ ಬ್ಲಾಕ್‌ನಲ್ಲಿ ನೆಲೆಸಿರುವ ಈ ಬೇಕರಿ ಯಾವಾಗಲೂ ಗ್ರಾಹಕರಿಂದ ತುಂಬಿರುತ್ತದೆ. ಹನಿ ಕೇಕ್ ಮತ್ತು ದಿಲ್ ಪಸಂದ್ ಇಲ್ಲಿ ತುಂಬಾ ಹಿಟ್ ಆದ ತಿನಿಸುಗಳಾಗಿ ಉಳಿದಿವೆ.

**ವಿ.ವಿ. ಬೇಕರಿ, ವಿವಿ ಪುರಂ**

1960 ರಿಂದ ಕಾರ್ಯ ನಿರ್ವಹಿಸುತ್ತಿರುವ ಈ ಬೇಕರಿಯು ಕಾಂಗ್ರೆಸ್ ಬನ್ ಹುಟ್ಟಿದ ಸ್ಥಳವಾಗಿದೆ. ಸ್ಪೈಸಿ ಖಾರ ಬನ್, ಮಸಾಲ ಬ್ರೆಡ್, ಹನಿ ಕೇಕ್‌ಗಳಿಗೆ ಇಲ್ಲಿ ಅಪಾರ ಬೇಡಿಕೆ ಇದೆ.

**ಓಜಿ ವಾರಿಯರ್ ಅಂಡ್ ಸನ್ಸ್, ರಾಜಾಜಿನಗರ**

ಇಲ್ಲಿನ ತಯಾರಿಕೆ ಶುದ್ಧತೆಗೆ ಸಾಕ್ಷಿಯಾಗಿದೆ. ಯಾವುದೇ ಸಂರಕ್ಷಣಾ ಪದಾರ್ಥವಿಲ್ಲದೆ ಹಳೆಯ ವಿಧಾನದಲ್ಲಿ ತಯಾರಾಗುವ ಬಟರ್ ಕುಕೀಸ್, ಬಿಸಿ ಬ್ರೆಡ್‌ಗಳು ಅದ್ಭುತ ರುಚಿಯನ್ನು ನೀಡುತ್ತವೆ.

**ಶ್ರೀ ಜಯಲಕ್ಷ್ಮೀ ಬೇಕರಿ, ಶಾಂತಿನಗರ**

ಫ್ರೆಶ್ ಬನ್, ವೆಜ್ ಪಫ್ಸ್, ಬಟರ್ ಬಿಸ್ಕೆಟ್ಸ್, ಆಪಲ್ ಕೇಕ್‌ಗಳಿಗಾಗಿ ಜನಪ್ರಿಯ. ಇಲ್ಲಿ ಸಿಗುವ ಬ್ರೆಡ್‌ಗಳು ದಿನವೂ ತಾಜಾ ಮತ್ತು ನಾಚುರಲ್ ಫ್ಲೇವರ್‌ನಿಂದ ತಯಾರಾಗುತ್ತವೆ.

**ಎಲ್.ಜಿ. ಅಯ್ಯಂಗಾರ್ ಬೇಕರಿ, ಮಲ್ಲೇಶ್ವರಂ**

80ರ ದಶಕದಿಂದಲೂ ಜನಪ್ರಿಯವಾಗಿರುವ ಈ ಬೇಕರಿಯಲ್ಲಿ ಕ್ರಿಸ್ಪಿ ಖಾರ ಬಿಸ್ಕಟ್, ಕ್ರೀಮಿ ವೆಜ್ ಪಫ್ಸ್, ವೆನಿಲ್ಲಾ ಸ್ಪಾಂಜ್ ಕೇಕ್‌ಗಳು ಯಾವಾಗಲೂ ಸಿಗುವ ರುಚಿಕರ ತಿನಿಸುಗಳು.

**ಬನ್‌ವರ್ಲ್ಡ್, ಮಲ್ಲೇಶ್ವರಂ**

1995ರಿಂದ ಅಯ್ಯಂಗಾರ್ ಶೈಲಿಯ ತಿನಿಸುಗಳತ್ತ ಗಮನ ಸೆಳೆದ ಈ ಬೇಕರಿಯ ಮಾವಾ ಕೇಕ್, ಎಗ್‌ಲೆಸ್ ಕೇಕ್, ಫಿಲ್ಟರ್ ಕಾಫಿ ಸೇರಿದಂತೆ ಹಲವಾರು ತಿನಿಸುಗಳು ಸಾಕಷ್ಟು ಜನಪ್ರಿಯ.

**ಶ್ರೀನಿವಾಸ ಬ್ರಾಹ್ಮಿನ್ಸ್ ಬೇಕರಿ, ಬಸವನಗುಡಿ**

1958ರಲ್ಲಿ ಸ್ಥಾಪನೆಯಾದ ಈ ಹೆರಿಟೇಜ್ ಬೇಕರಿಯು ತಲತಲಾಂತರಗಳಿಂದ ಆಪ್ತ ಬಂಧದ ರುಚಿಯನ್ನು ಕಾಪಾಡಿಕೊಂಡು ಬಂದಿದೆ. ಬಟರಿ ಬನ್, ಕ್ರಂಚಿ ರಸ್ಕ್, ಆಪಲ್ ಕೇಕ್, ಕೊಕನಟ್ ಬಿಸ್ಕಟ್‌ಗಳು ಇಲ್ಲಿನ ಜನಪ್ರಿಯ ಉತ್ಪನ್ನಗಳು.

ಅಯ್ಯಂಗಾರ್ ಶೈಲಿಯ ಸಿಂಪಲ್ ಮತ್ತು ಕ್ಲಾಸಿಕ್ ರುಚಿಗಳಿಗೆ ಈ ಬೇಕರಿಗಳು ನಂಬರ್ ಒನ್ ಸ್ಪಾಟ್.

# 2600 ಕೋಟಿ ದಾಖಲೆಗಳು ಡಾರ್ಕ್ ವೆಬ್ ವಶಕ್ಕೆ



**ಇ**ತ್ತೀಚೆಗೆ ಅಮೇರಿಕಾದ ಫೋರ್ಡ್ ಪತ್ರಿಕೆ ಒಂದು ವರದಿ ಪ್ರಕಟಿಸಿತ್ತು, 'ದತ್ತಾಂಶ ಸೋರಿಕೆಯ ಎಲ್ಲಾ ಪ್ರಕರಣಗಳ ಮಹಾತಾಯಿ' ಎಂದು ಆ ವರದಿಯ ತಲೆಬರಹವನ್ನು ಕನ್ನಡಕ್ಕೆ ಸ್ಥೂಲವಾಗಿ ಅನುವಾದಿಸಬಹುದು. ಆ ವರದಿಗೆ ಹಾಗೆ ತಲೆಬರಹ ನೀಡಲೂ ಪಾಸ್‌ವರ್ಡ್‌ಗಳು, ಪಿಸ್ವ್ಯಾಟ್ರನ್‌ಗಳು, ವೈಯಕ್ತಿಕ ಘನಮಾಹಿತಿಯು ರೂ.2600 ಕೋಟಿಯಷ್ಟು, (ಕೆಲವು ದಾಖಲೆಗಳು ಹಲವು ಪ್ರತಿಗಳಲ್ಲಿ ಇರುವ ಕಾರಣ ಇಷ್ಟು ದೊಡ್ಡ ಸಂಖ್ಯೆಯನ್ನು ತೋರಿಸಲಾಗಿದೆ) ಇರಬಹುದೆಂದು ಅಂದಾಜಿಸಲಾಗಿದ್ದು, ಭಾರತದ ಸುದ್ದಿ ಮಾಧ್ಯಮಗಳು ಈ ಬಗ್ಗೆ ಸಂಕ್ಷಿಪ್ತ ವರದಿಗಳನ್ನು ಪ್ರಕಟಿಸಿ ಸುಮ್ಮನಾದವು. ಏಕೆಂದರೆ ಫೋರ್ಡ್ ಪತ್ರಿಕೆ ಪ್ರಕಟಿಸಿದ್ದ ವರದಿಯಲ್ಲಿ ಭಾರತೀಯರ ದತ್ತಾಂಶಗಳು ಸೋರಿಕೆಯಾದುದರ ಬಗ್ಗೆ ಮಾಹಿತಿ ಇರಲಿಲ್ಲ. ಅದರೆ ವಾಸ್ತವ ದತ್ತಾಂಶಗಳೂ ಇಲ್ಲಿ ಸೋರಿಕೆಯಾಗಿದ್ದವು.

ಈ ದತ್ತಾಂಶ ಸೋರಿಕೆಯನ್ನು ಪತ್ತೆ ಮಾಡಿದ್ದು ಸೈಬರ್ ಭದ್ರತಾ ಸೇವಾ ಸಂಸ್ಥೆ 'ಸೆಕ್ಯುರಿಟಿ ಡಿಸ್ಕವರಿ', 'ಡಾರ್ಜ್‌ವೆಬ್‌ನಲ್ಲಿ ಇಷ್ಟೊಂದು ದತ್ತಾಂಶವನ್ನು ಸೋರಿಕೆ ಮಾಡಲಾಗಿತ್ತು. ಇವೆಲ್ಲವೂ ಇತ್ತೀಚೆಗೆ ಕದ್ದ ಮಾಹಿತಿಯಲ್ಲ, ಬದಲಿಗೆ ಈವರೆಗಿನ ಫೋಲ್ಡರ್‌ಗಳು ಡಾರ್ಕ್ ವೆಬ್ ಮೂಲೆಯಲ್ಲಿ ನಡೆದಿದ್ದ ಮತ್ತು ದತ್ತಾಂಶ ಪ್ರತ್ಯೇಕ ಫೋಲ್ಡರ್ ಗಳಲ್ಲಿ ಸಂಗ್ರಹಿಸಿ ಅನೇಕ ಮೂಲಗಳಿಂದ ಜಾಲತಾಣಗಳಲ್ಲಿ ಲಭ್ಯವಾಗಿದ್ದ 3500 ದಶಲಕ್ಷ ದತ್ತಾಂಶವನ್ನು ಪರಸ್ಪರ ಹೊಂದಿಸಲಾಗಿದೆ. ಇದು ಹೆಚ್ಚು ಅಪಾಯಕಾರಿ ಅಂಶ ಅಂತಲೂ ವ್ಯಕ್ತವಾಗಿರುತ್ತದೆ.

ಇಷ್ಟೊಂದು ದತ್ತಾಂಶಗಳು ಮೂಲ ವೆಬ್ ಕಡತಗಳಿಂದ ಪಾಸ್‌ವರ್ಡ್‌ಗಳನ್ನು ಹೊಂದಿಸಿ ಇಡುವ ಅವಶ್ಯಕತೆ ಇತ್ತಾ? ಯಾವ ಉದ್ದೇಶಕ್ಕಾಗಿ ಅವುಗಳನ್ನು ಹೀಗೆ ಹೊಂದಿಸಿ ಇಡಲಾಗಿತ್ತು? ಇವು ನಮ್ಮ ಮುಂದೆ ಇದ್ದ ದೊಡ್ಡ ಸವಾಲು. ಇಷ್ಟು ದೊಡ್ಡ ಪ್ರಮಾಣದ ದತ್ತಾಂಶ ಸಂಸ್ಕರಣೆಯನ್ನು ಯಾವುದೇ ಒಬ್ಬ ವ್ಯಕ್ತಿ ಅಥವಾ ಒಂದು ಗುಂಪು ಸಂಗ್ರಹ ಮಾಡುವ ಸಾಧ್ಯತೆ ಏಕಿತ್ತು? ಹೀಗೆ ಸಂಗ್ರಹ ವಾಗಿರುವ ದತ್ತಾಂಶವನ್ನು ಇಂತಹ ಡಾರ್ಕ್ ವೆಬ್ ದೊಡ್ಡ ಗುಂಪು ಅಥವಾ ಸರ್ಕಾರ ಹಿಡಿತದಲ್ಲಿಟ್ಟುಕೊಳ್ಳಲು ಸಂಗ್ರಹ ಮಾಡಿರಬಹುದು ಎಂದು ವರದಿಯಲ್ಲಿ ಶಂಕಿಸಲಾಗಿರುತ್ತದೆ.

"ಆದರೆ ಅದಕ್ಕಿಂತಲೂ ಹೆಚ್ಚು ಅಪಾಯಕಾರಿಯಾಗಿರುವ ಅಂಶವೆಂದರೆ ಹೀಗೆ ಅತ್ಯಂತ ವ್ಯವಸ್ಥಿತವಾಗಿ ಜಾಲತಾಣಗಳಿಂದ ಪಡೆದಿದ್ದನ್ನು ವಿಂಗಡಿಸಿ 3,800 ಫೋಲ್ಡರ್‌ಗಳನ್ನು, ಯಾರೋ ಬೇರೊಬ್ಬರಿಗಾಗಿ ಮತ್ತು ಅವನ್ನು ಡಾರ್ಕ್ವೆಲ್‌ನಲ್ಲಿ (ಡಾರ್ಕ್‌ವೆಬ್) ಮಾರಾಟಕ್ಕೆ ಪ್ರಯತ್ನ ಪಟ್ಟಿರಬಹುದೆಂದು ಅಂದಾಜಿಸಲಾಗಿದ್ದು ಈ ಮಾಹಿತಿ ಕಡತಗಳ ವರ್ಗಾವಣೆ ಯಾರು ಬೇಕಾದರು ಮಾಡಿಕೊಳ್ಳಬಹುದಾಗಿದ್ದು ಇದು ಇಡೀ ಜಗತ್ತಿಗೆ ಅತ್ಯಂತ ಅಪಾಯಕಾರಿ ಮಾಹಿತಿ ಕಳ್ಳತನವಾಗಿರುತ್ತದೆ.

ಆದ್ದರಿಂದ ನಿಮ್ಮ ನಿಮ್ಮ ಜಾಲತಾಣಗಳ ಸಾಮಾಜಿಕ ಖಾತೆಗಳನ್ನು ಬೇರೊಬ್ಬರು ತೆರೆದು, ಪೋಸ್ಟ್ ಮಾಡಬಹುದು ಅಥವಾ ನಿಮ್ಮ ಖಾತೆಗಳಲ್ಲಿ ಇರುವ ವೈಯಕ್ತಿಕ ಚಿತ್ರಗಳನ್ನು ಕದಿಯಬಹುದು.' ಇಂತಹ ವೈಯಕ್ತಿಕ ದತ್ತಾಂಶಗಳ ದುರ್ಬಳಕೆಯ ಸಾಧ್ಯತೆಯನ್ನು ಸೆಕ್ಯುರಿಟಿ ಡಿಸ್ಕವರಿ ವಿವರಿಸಿರುತ್ತದೆ.

ಹೀಗೆ ಬಳಕೆದಾರರ ಇಷ್ಟೆಲ್ಲಾ ಮಾಹಿತಿಯ ವಿವರಗಳನ್ನು ವರದಿಯಲ್ಲಿ ನೀಡಲಾಗಿದ್ದು ನಾವು ಬಳಸುವ ಎಲ್ಲಾ ಆನ್‌ಲೈನ್ ಪ್ಲಾಟ್‌ಫಾರಂಗಳ ಮೂಲಕ ಬಳಕೆದಾರರ ಮಾಹಿತಿಯನ್ನು ಗ್ರಹಿಸಲಾಗಿರುತ್ತದೆ. ಕೆಲವು ಕಂಪನಿಗಳು ತಮ್ಮ ಭದ್ರತಾ ವ್ಯವಸ್ಥೆಗಳನ್ನು ಬಲಪಡಿಸಿಕೊಳ್ಳುವುದಾಗಿ ಹೇಳಿದ್ದರೂ ಕೆಲವು ಕಂಪನಿಗಳು ಅಪ್ಲಿಕೇಷನ್‌ಗಳ ಬಳಕೆದಾರರು ತಮ್ಮ ಪಾಸ್‌ವರ್ಡ್‌ಗಳನ್ನು ಸುರಕ್ಷಿತವಾಗಿಟ್ಟಿಲ್ಲದ ಪ್ರಯುಕ್ತ ಅವು ಡಾರ್ಕ್ ವೆಬ್‌ನಲ್ಲಿ ಮಾರಾಟಕ್ಕೆ ಸುಲಭ ತುತ್ತಾಗಿರುತ್ತದೆ.

ಆದ್ದರಿಂದ ಜಾಗತಿಕವಾಗಿ ಜಾಲತಾಣಗಳಲ್ಲಿ ಸಾಮಾಜಿಕ ಮಾಧ್ಯಮಗಳ ಮೂಲಕ ನಾವುಗಳು ಹಂಚಿ ಕೊಳ್ಳುವ ವೈಯಕ್ತಿಕ ಮಾಹಿತಿಗಳು ಅಪಾಯ ಕಾರಿ ರೀತಿಯಲ್ಲಿ ಪ್ರಪಂಚದ ಮೂಲೆ ಮೂಲೆ ಗಳಿಗೆ ರವಾನೆಯಾಗಿ ಮಾಹಿತಿದಾರರು ನಮ್ಮ ವೈಯಕ್ತಿಕ ಮಾಹಿತಿಗಳನ್ನು ಮಾರಾಟ ಮಾಡಲು ಅನುವು ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಆದಷ್ಟು ನಮ್ಮ ವೈಯಕ್ತಿಕ ಮಾಹಿತಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವ ಮುನ್ನ ಮುನ್ನೆಚ್ಚರಿಕೆಯಿಂದ ಒದಗಿಸುವುದು ಸೂಕ್ತವಾಗಿರುತ್ತದೆ.

# ಕಷ್ಟಪಡುವುದೆಂದರೇನು?

**ಕ**ಷ್ಟ ಪಡುವುದಕ್ಕಿಂತ ಕಷ್ಟ ಬರುತ್ತೆ ಅಂದುಕೊಳ್ಳುವುದೇ ದೊಡ್ಡ ಸಮಸ್ಯೆ. ಕಷ್ಟ ಸಂಕಟ ಬಂದು ಹೋದಮೇಲೆ ಇಷ್ಟೇನಾ ಅಂತ ಅನ್ನಿಸಬಹುದು. ಆದರೆ ಕಷ್ಟದ ನಿರೀಕ್ಷೆಯೇ ಅತ್ಯಂತ ಹಿಂಸಾದಾಯಕವಾದದ್ದು. ಅದೂ ನಮ್ಮಲ್ಲಿ ಏನಾದರೂ ಕೆಟ್ಟ ಕೆಲಸ ಮಾಡಿದಾಗ ಪಾಪಪ್ರಜ್ಞೆ ಕಾಡುತ್ತದೆಯಲ್ಲ, ಅದಕ್ಕಿಂತ ಘೋರ ಯಾವುದೂ ಇಲ್ಲ.

ಇದರಲ್ಲಿ ಇನ್ನೊಂದು ಬಗೆ ಹೆದರಿಸುವುದು. ಯಾರಾದರೂ ಅವರ ಸ್ಥಿತಿಯಲ್ಲಿಯೇ ಚೆನ್ನಾಗಿರುವಾಗ ಅವರನ್ನು ಬದಲಿಸುವ, ಪ್ರಲೋಭಿಸುವ ಕೆಲಸ ಮಾಡುವುದು. ಇದು ಅವರಿಗೆ ಸಹಾಯ ಮಾಡುವಂತೆಯೇ ಹೇಳುವುದಾದರೂ, ಅದರಿಂದ ಕಷ್ಟಕ್ಕೆ ಒಳಗಾಗುವವರು ಅವರೇ. ಅರ್ಥವಾಗಲಿಲ್ಲ ಅಲ್ವ. ಈಗ ನನ್ನ ಹತ್ರ ಕಾರ್ ಇಲ್ಲ. ತುಂಬಾ ಆಪ್ತವಾದ ಮಿತ್ರನೊಬ್ಬ ಬಂದು, "ಅಯ್ಯೋ.. ಕಾರ್ ಇಲ್ಲದೆ ಈ ಬೆಂಗ್ಳೂರಲ್ಲಿ ಹೇಗಿದ್ದಿ ಮಾರಾಯ? ಒಂದು ಕಾರ್ ತಗೋಬೇಕು. ಏನು ಅರ್ಜೆನ್ಸಿ ಇರುತ್ತೆ ಅಂತ ಹೇಳಕ್ಕಾಗಲ್ಲ. ಅದೂ ಕಾರ್ ತುಂಬಾ ಉಪಯೋಗ". ಹಾಗೆ ಹೀಗೆ ಹೇಳಿ, ಈಗ ನನ್ನಲ್ಲಿ ಕಾರ್ ಇಲ್ಲದೇ ಇರುವುದರಿಂದಲೇ ಜಗತ್ತಿನ ಎಲ್ಲಾ ಕಷ್ಟಗಳು ನನಗೆ ಬಂದಿದೆ ಅಂದುಕೊಳ್ಳಬೇಕು. ಒಂದೊಂದು ಸನ್ನಿವೇಶ ದಲ್ಲಿಯೂ, ಈಗ ಕಾರ್ ಇದ್ರೆ ಎಷ್ಟು ಒಳ್ಳೆಯ ದಿತ್ತು ಅನ್ನುವ ಬಗೆಗೆ ಚಿಂತೆ ಹೆಚ್ಚಾಗುವಂತೆ ಮಾಡುತ್ತದೆ.



ಹಳೇ ಕತೆಯೊಂದಿದೆ. ತುಂಬಾ ಜನರಿಗೆ ಗೊತ್ತಿರಬಹುದು. ಇಂಗ್ಲೆಂಡಿನಲ್ಲಿ ಒಬ್ಬ ರಾಜನಿದ್ದನಂತೆ. ಪ್ರಜೆಗಳಿಗೆ ಅನುಕೂಲ ವಾಗಿಯೂ, ಪ್ರಜಾಹಿತಚಿಂತಕನೂ ಆಗಿದ್ದನಂತೆ ರಾಜ. ಒಂದು ದಿನ ಹೀಗೇ ಸುತ್ತಾಡಿ ವಾಪಸ್ ಅರಮನೆಯೊಳಗೆ ಬರಬೇಕು, ಕೋಟೆಯ ದ್ವಾರದ ಆಸುಪಾಸಿನಲ್ಲಿ ಒಬ್ಬ ಮುದುಕ ಬರೀ ಒಂದು ಬಟ್ಟೆಯಲ್ಲಿ ನಿಂತು ಕೊಂಡಿದ್ದನಂತೆ. ರಾಜನಿಗೆ ಕಸಿವಿಸಿ ಯಾಯ್ತು. ಈ ಕಾಲದಲ್ಲಿ ಅದೂ ಈ ಹಿಮಪಾತವಾಗುವ ಸಮಯದಲ್ಲಿ ಈ ಮುದುಕ ಅದು ಹೇಗೆ ಒಂದು ಬಟ್ಟೆಯಲ್ಲಿ ಬದುಕುತ್ತಾನೋ. ಅಸಹನೀಯ ಚಳಿ ಆತನಿಗೆ ಸಮಸ್ಯೆಯಲ್ಲವೇ ಎಂದುಕೊಂಡು ಮುದುಕನ ಬಳಿಗೆ ಹೋಗಿ ಮಾತನಾಡಿದ. ಸ್ವಾಮೀ, ನಾನು ಈಗಲೇ ಹೋಗಿ ಒಳ್ಳೆಯ ಉಣ್ಣೆಬಟ್ಟೆಗಳನ್ನು ತಂದುಕೊಡುತ್ತೇನೆ. ಇಲ್ಲಿಯೇ ಇರಿ, ಎಂದು ರಾಜ ಅರಮನೆಗೆ ಹೋದ.

ಆ ದಿನ ರಾಜನಿಗೆ ಮರೆತುಹೋಯಿತು. ತಡರಾತ್ರಿ ತಾನು ಕೊಟ್ಟಿದ್ದ ಮಾತು ನೆನಪಾಯಿತು. ಬೆಳಗ್ಗೆ ಎದ್ದಕೂಡಲೇ ಒಬ್ಬರು ಮಂತ್ರಿಗಳನ್ನು ಕರೆದು ಒಂದಷ್ಟು ಉಣ್ಣೆಬಟ್ಟೆಗಳನ್ನು ಮುದುಕನಿಗೆ ತಲುಪಿಸಲು ಹೇಳಿದ. ಮಂತ್ರಿ ಅವನನ್ನು ಹುಡುಕಿ ಹೋದರೆ, ಆ ಮರದ ಪೊಟರೆಯಲ್ಲಿ ಒಂದು ಚೀಟಿ ಇದ್ದಿತ್ತು. ಸ್ವಲ್ಪ ದೂರದಲ್ಲಿ ಮುದುಕ ಹೆಣವಾಗಿ ಮಲಗಿದ್ದ. ಚೀಟಿಯನ್ನು ತಂದು ಮಹಾರಾಜನಿಗೆ ಕೊಟ್ಟನು ಮಂತ್ರಿ.

ಆ ಚೀಟಿಯಲ್ಲಿ ಹೀಗಿತ್ತು. 'ನಾನು ಎಪ್ಪತ್ತು ಎಪ್ಪತ್ತೈದು ವರ್ಷಗಳಿಂದ ಒಂದೇ ಬಟ್ಟೆಯಲ್ಲಿ ಇದ್ದಿದ್ದೆ, ಯಾವ ಚಳಿಯೂ, ಶೀತವೂ, ಜ್ವರವೂ ಬಾಧಿಸಲಿಲ್ಲ. ನಿನ್ನೆ ನಿಮ್ಮ ಭೇಟಿಯಿಂದ ಬಟ್ಟೆಗಳ ನಿರೀಕ್ಷೆ ಅತಿಯಾಯ್ತು. ಒಂದು ವೇಳೆ ಉಣ್ಣೆಬಟ್ಟೆಗಳು ಸಿಕ್ಕಿದರೆ ಎಷ್ಟು ಹಿತ, ಎಷ್ಟು ಸುಖವೆಂದು ಆಲೋಚಿಸುತ್ತಾ ದೇಹ ಚಳಿಯನ್ನು ತಡೆಯುವ ಶಕ್ತಿ ಕುಂಠಿತವಾಯ್ತು. ನೀವು ಬಟ್ಟೆ ತರಲಿಲ್ಲವೆಂದು ನನ್ನ ಬೇಸರವಲ್ಲ, ಆದರೆ ಇಷ್ಟು ವರ್ಷಗಳ ಕಾಲ ಈ ಚಳಿಯನ್ನು ಹಿತವೆಂದೇ ಭಾವಿಸಿದ ನಾನು ಈಗ ಚಳಿಗೇ ರೋಗಿಯಾಗಿದ್ದೇನೆ. ನಿರೀಕ್ಷೆಯೇ ದೊಡ್ಡ ಕಷ್ಟ, ಆಸೆಯಲ್ಲ ಇದು. ಏನೆಂದು ಕೊಳ್ಳುವುದು ಇದನ್ನು? ಕೊರೊನಾದಂತಹ ಕಾಲದಲ್ಲಿ ಇಂತಹ ಕಷ್ಟದ ನಿರೀಕ್ಷೆಗಳಿಂದಲೇ ದೈಹಿಕವಾಗಿ, ಮಾನಸಿಕವಾಗಿ ಕುಗ್ಗುವ ಅನೇಕ ಘಟನೆಗಳು, ವ್ಯಕ್ತಿಗಳ ಬಗೆಗೆ ಸುದ್ದಿಗಳಿವೆ. ಹಾಗಾಗಿ ಇದೊಂದು ರೀತಿಯ ನಿರೀಕ್ಷಣಾ ವ್ಯಸನ.

# ಶೋಲೆ ಹಿಂದಿ ಚಿತ್ರಕ್ಕೆ ಸುವರ್ಣ ಸಂಭ್ರಮ

**ಭಾ**ರತ ಚಿತ್ರರಂಗದ ಇತಿಹಾಸದಲ್ಲಿ ಮೈಲುಗಲ್ಲಾದ ಚಿತ್ರಕ್ಕೆ ಇದೀಗ ಸುವರ್ಣ ಸಂಭ್ರಮ. ಊಹೆಗೂ ನಿಲುಕದಂತ ಅತ್ಯಂತ ಭಾರೀ ವಾಣಿಜ್ಯ ಯಶಸ್ಸು ಮತ್ತು ಬಾಕ್ಸ್ ಆಫೀಸ್‌ನಲ್ಲಿ ದಾಖಲೆ ಗಳಿಕೆ ಚಿತ್ರವೆಂಬ ಹೆಗ್ಗಳಿಕೆಯ ಈ ಚಿತ್ರ ಭಾರತ ಮತ್ತು ಮುಂಬೈ ಚಿತ್ರರಂಗಕ್ಕಲ್ಲದೇ ಕರ್ನಾಟಕಕ್ಕೂ ಹಿರಿಮೆ ಮತ್ತು ಗಿರಿಮೆ ತಂದುಕೊಟ್ಟ ಚಿತ್ರವಿದು.

ಶುಕ್ರವಾರ, ಆಗಸ್ಟ್ 15, 1975ರಂದು ಬಿಡುಗಡೆಯಾದ ಶೋಲೆ ಚಿತ್ರವು ಈ ವರ್ಷದ ಆಗಸ್ಟ್ 15ಕ್ಕೆ 50 ವರ್ಷಗಳನ್ನು ಪೂರೈಸಿದೆ. 1975ರಲ್ಲಿ ಸ್ವಾತಂತ್ರ್ಯ ದಿನದಂದು ಮೊದಲು ಪ್ರದರ್ಶಿಸಲಾದ ಈ ಚಲನಚಿತ್ರವು ತ್ವರಿತವಾಗಿ ಒಂದು ವಿದ್ಯಮಾನವಾಗಿ ಬೆಳೆಯಿತು. ಅದರ ಸಂಭಾಷಣೆಗಳು ಮನೆಯ ಕ್ಯಾಚ್‌ಫ್ರೇಸ್‌ಗಳಾದವು, ಅದರ ಪಾತ್ರಗಳು ಪಾಪ್ ಸಂಸ್ಕೃತಿಯ ಭಾಗವಾದವು ಮತ್ತು ಅದರ ಹಾಡುಗಳು ತಲೆಮಾರುಗಳಾದ್ಯಂತ ಗುನುಗುತ್ತವೆ. ಐದು ದಶಕಗಳ ನಂತರ, ಶೋಲೆಯ ಉಲ್ಲೇಖವು ಇನ್ನೂ ನಾಸ್ಟಾಲ್ಜಿಯಾವನ್ನು ಹುಟ್ಟುಹಾಕುತ್ತದೆ.


ತಾರಾಗಣವು ಭಾರತೀಯ ಚಿತ್ರರಂಗದ ಅಂದಿನ ಪ್ರಸಿದ್ಧ ಮತ್ತು ಗ್ಲಾಮರಸ್ ನಟ–ನಟಿಯರಾದ ಅಮಿತಾಭ್ ಬಚ್ಚನ್, ಧರ್ಮೇಂದ್ರ, ಸಂಜೀವ್ ಕುಮಾರ್, ಹೇಮಾ ಮಾಲಿನಿ, ಜಯಾ ಬಚ್ಚನ್ ಮತ್ತು ಅಮ್ಜದ್ ಖಾನ್. ಸಲೀಂ–ಜಾವೇದ್ ಅವರ ಬರವಣಿಗೆ ಮತ್ತು ರಮೇಶ್ ಸಿಪ್ಪಿ ಅವರ ನಿರ್ದೇಶನದೊಂದಿಗೆ ಪ್ರಾರಂಭಿಸಲಾದ ಈ ಚಿತ್ರವು ಸ್ನೇಹ ಮತ್ತು ಸೇಡಿನ ಕಥೆಗಿಂತ ಹೆಚ್ಚಿನ ಮನರಂಜನೆಯನ್ನೇ ಪ್ರೇಕ್ಷ ವೀಕ್ಷಕರಿಗೆ ಇಂದಿಗೂ ನೀಡುತ್ತಿದೆ. ಇದು ಭಾರತ ಹಿಂದೆಂದೂ ನೋಡಿರದ ರೀತಿಯಲ್ಲಿ ಅತ್ಯಂತ ಮಹತ್ವಾಕಾಂಕ್ಷೆಯ – ಮಿಶ್ರಣದ ಆಕ್ಷನ್, ಭಾವನೆ ಮತ್ತು ಅದ್ಭುತದ ಸಿನಿಮಾವಾಗಿ ರೂಪಗೊಂಡಿದೆ.

ಅಂದಿನ ಕಾಲಕ್ಕೆ ಕೇವಲ 2.4 ಕೋಟಿಯ ಭಾರಿ ಬಜೆಟ್‌ನಲ್ಲಿ ನಿರ್ಮಿಸಲಾದ ಶೋಲೆ, ಚಿತ್ರವು ತದನಂತರ ವರ್ಷಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಗಳಿಸಿತು ಮತ್ತು ಭಾರತದಲ್ಲಿ ಅತಿ ಹೆಚ್ಚು ವೀಕ್ಷಿಸಲ್ಪಟ್ಟ ಚಿತ್ರಗಳಲ್ಲಿ ಒಂದಾಗಿದೆ. ಮುಂಬೈನ ಮಿನರ್ವಾ ಥಿಯೇಟರ್‌ನಲ್ಲಿ ಐದು ವರ್ಷಗಳ ಕಾಲ ನಿರಂತರವಾಗಿ 286 ವಾರಗಳ ಕಾಲ ಪ್ರದರ್ಶನಗೊಂಡಿದ್ದು ಇಂದಿಗೂ ದಾಖಲೆ ಎಂದೇ ಹೇಳಲಾಗುತ್ತದೆ. ಬೆಂಗಳೂರು ಸಂತೋಷ 70 ಎಂ.ಎಂ. ಚಿತ್ರಮಂದಿರದಲ್ಲಿ ಯಶಸ್ವಿ ಪ್ರದರ್ಶನ ಕಂಡ ಈ ಚಿತ್ರವು ಕನ್ನಡಿಗರ ಮನಸ್ಸನ್ನು ಸೂರೆಗೊಂಡಿತ್ತು.

"ಶೋಲೆ ಚಿತ್ರದ ಮ್ಯಾಜಿಕ್ ಏನೆಂದರೆ, 50 ವರ್ಷಗಳ ನಂತರವೂ ಜನರು ಅದೇ ಕ್ಷಣಗಳಲ್ಲಿ ನಗುತ್ತಾರೆ, ಅಳುತ್ತಾರೆ ಮತ್ತು ಹುರಿದುಂಬಿಸುತ್ತಾರೆ" ಎಂದು ನಿವೃತ್ತ ಶಾಲಾ ಶಿಕ್ಷಕಿ ಲಕ್ಷ್ಮಿ ನಾರಾಯಣ್ ಹೇಳುತ್ತಾರೆ, ಅವರು ಅದನ್ನು ಹಲವಾರು ಬಾರಿ ವೀಕ್ಷಿಸಿದ್ದಾರೆ. "ಇದು ಕೇವಲ ಸಿನಿಮಾ ಆಗಿರಲಿಲ್ಲ, ಅದು ಒಂದು ಅನುಭವ, ಒಂದು ಹಬ್ಬವಾಗಿತ್ತು."

"ಶೋಲೆ ಚಿತ್ರ ಬಿಡುಗಡೆ ನಂತರ, ಭಾರತೀಯ ಚಲನಚಿತ್ರ ನಿರ್ಮಾಪಕರು ಸಿನಿಮಾವು ಮಹಾಕಾವ್ಯದ ಪ್ರಮಾಣದಲ್ಲಿ ಸಾಮೂಹಿಕ ಮನರಂಜನೆ ಮತ್ತು ಕಲೆ ಎರಡೂ ಆಗಿ ನಿರ್ಮಾಣ ಮಾಡಬಹುದು ಎಂದು ಅರಿತುಕೊಂಡರು" ಎಂದು ಚಲನಚಿತ್ರ ವಿಮರ್ಶಕ ಪ್ರಕಾಶ್ ಹೇಳುತ್ತಾರೆ.

ಆದರೂ, ಈ ಚಿತ್ರದ ದೃಶ್ಯ ವೈಭವಕ್ಕಾಗಿ, ಕಾರಣವಾದ 'ಶೋಲೆ ಬೆಟ್ಟ' ಎಂದೂ ಕರೆಯಲ್ಪಡುವ ರಾಮದೇವರ ಬೆಟ್ಟವು ಸ್ಥಳವು ಅಭಿವೃದ್ಧಿಯಲ್ಲಿ ಹಿಂದೆ ಉಳಿದಿದೆ. ರಾಮನಗರ ಪಟ್ಟಣದಿಂದ ಕೇವಲ 3 ಕಿ.ಮೀ ಮತ್ತು ಬೆಂಗಳೂರಿನಿಂದ ಸುಮಾರು 50 ಕಿ.ಮೀ ದೂರದಲ್ಲಿ ಎತ್ತರವಾಗಿ ನಿಂತ ಏಕಶಿಲಾ ಬೆಟ್ಟದ ಬುಡದಲ್ಲಿ ಒಂದು ದೇವಾಲಯವಿದೆ ಮತ್ತು ಮೆಟ್ಟಿಲುಗಳು ಮೂಲಕ ಪ್ರವಾಸಿಗರನ್ನು ಮೇಲಕ್ಕೆ ಕರೆದೊಯ್ಯುತ್ತವೆ. ನಿಷ್ಠಾವಂತರಿಗೆ, ಇದು ಧಾರ್ಮಿಕ ಹೆಗ್ಗುರುತಾಗಿ ಉಳಿದಿದ್ದು ಭಾರತೀಯ ಚಲನಚಿತ್ರ ಉತ್ಸಾಹಿಗಳಿಗೆ, ಇದು ಮತ್ತೊಂದು




ಕಾರಣಕ್ಕಾಗಿ ಪವಿತ್ರವಾಗಿದೆ – ಅದೇನೆಂದರೆ ಗಬ್ಬರ್ ಸಿಂಗ್ ಅವರ ನಗು ಒಮ್ಮೆ ಪ್ರತಿಧ್ವನಿಸಿದ ಸ್ಥಳ ಇದು. ಪ್ರವಾಸಿಗರು ಇನ್ನೂ ಭೇಟಿ ನೀಡುತ್ತಾರೆ, ಕಲ್ಲಿನ ಮೆಟ್ಟಿಲುಗಳನ್ನು ಹತ್ತಿ, ಬಂಡೆಗಳ ವಿರುದ್ಧ ಚಿತ್ರಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಜೈ ಮತ್ತು ವೀರು ಅವರ ನೆನಪುಗಳನ್ನು ಮೆಲುಕು ಹಾಕುತ್ತಾರೆ.

ಶೋಲೆಯ ಚಿತ್ರೀಕರಣ ನಿರ್ಮಾಣವು ಸತತ ಎರಡು ವರ್ಷಗಳ ಕಾಲ ನಡೆಯಿತು. 70ರ ದಶಕದ ಆದಿಭಾಗದಲ್ಲಿ ಸೆಟ್‌ಗಳನ್ನು ತಲುಪಲು ವಿಶೇಷ ರಸ್ತೆಯನ್ನು ಸಹ ನಿರ್ಮಿಸಲಾಗಿತ್ತು. ಆ ಸಮಯದಲ್ಲಿ ಕೇವಲ ಏಳು ವರ್ಷದವರಾಗಿದ್ದ ರಾಮನಗರದ ನಿವಾಸಿ ಬೋರಮ್ಮ, ಚಿತ್ರವು ನೆನಪುಗಳನ್ನು ಮಾತ್ರವಲ್ಲದೆ ನಿಜ ಜೀವನದ ಬಂಧಗಳನ್ನು ಹೇಗೆ ಸೃಷ್ಟಿಸಿತ್ತು ಎಂಬುದನ್ನು ನೆನಪಿಸಿಕೊಳ್ಳುತ್ತಾರೆ. ಮುಖ್ಯವಾಗಿ "ಛಾಯಾಗ್ರಾಹಕ ಸಿಬ್ಬಂದಿಯ ಒಬ್ಬ ವ್ಯಕ್ತಿ ಚಿತ್ರೀಕರಣದ ಸಮಯದಲ್ಲಿ ತನ್ನ ಸಹೋದರಿಯನ್ನು ಮೆಚ್ಚಿ ಮದುವೆಯ ಪ್ರಸ್ತಾಪನೆಯನ್ನು ಮಂಡಿಸಿ ಮತ್ತು ತಮ್ಮ ಹೆತ್ತವರ ಒಪ್ಪಿಗೆಯೊಂದಿಗೆ, ಮದುವೆ ಮಾಡಿ ಕೊಂಡು ನಮ್ಮ ಕುಟುಂಬಗಳು ಒಂದಾದವು. ಒಂದು ಸಂತೋಷಕರ ತಿರುವು, ನನ್ನ ಸಹೋದರಿಯ ವಿವಾಹವು ಚಿತ್ರಕ್ಕಾಗಿ ನಿರ್ಮಿಸಲಾದ ಅದೇ ಮದುವೆಯ ಸೆಟ್‌ನಲ್ಲಿ ನಡೆ ಯಿತು." ಎಂದು, ಬೋರಮ್ಮ ಈಗ ಮಾರ್ಗದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ, ಈ ಕಾಲಾತೀತ ಶೋಲೆ ಕಥೆಗಳನ್ನು ಸಂದರ್ಶಕರೊಂದಿಗೆ ಸಂತೋಷದಿಂದ ಹಂಚಿಕೊಳ್ಳುತ್ತಾರೆ.

ಪ್ರಪಂಚದಾದ್ಯಂತ ಶೋಲೆಯನ್ನು ಸಿನಿಮೀಯ ಮೇರುಕೃತಿಯಾಗಿ ಆಚರಿಸಲಾಗುತ್ತಿದ್ದರೂ, ಅದರ ಸೃಷ್ಟಿಯ ನಿಜವಾದ ತಾಣವನ್ನು ಹೆಚ್ಚಾಗಿ ನಿರ್ಲಕ್ಷಿಸಲಾಗುತ್ತಿರುವುದು ವಿಪರ್ಯಾಸವೆನಿಸುತ್ತದೆ. ನ್ಯೂಜಿಲೆಂಡ್‌ನ ಹೊಬ್ಬಿಟನ್‌ನಿಂದ ಹಾಲಿವುಡ್‌ನ ವಾಕ್ ಆಫ್ ಫೇಮ್‌ವರೆಗೆ ಜಗತ್ತಿನ ಅನೇಕ ಭಾಗಗಳಲ್ಲಿ ಚಲನಚಿತ್ರ ಪ್ರವಾಸೋದ್ಯಮವು ಪ್ರವರ್ಧಮಾನಕ್ಕೆ ಬರುತ್ತಿರುವ ಉದ್ಯಮವಾಗಿದೆ – ಆದರೂ ರಾಮನಗರದ ಬೆಟ್ಟಗಳು ಇನ್ನೂ ಆ ಗಮನಕ್ಕಾಗಿ ಕಾಯುತ್ತಿವೆ. "ಸ್ವಲ್ಪ ದೂರದೃಷ್ಟಿಯೊಂದಿಗೆ, ಇದು ಭಾರತದ ಸ್ವಂತ ಚಲನಚಿತ್ರ ಪರಂಪರೆಯ ತಾಣವಾಗಬಹುದು" ಎಂದು ಬೆಂಗಳೂರು ಮೂಲದ ಟೆಕ್ಕಿ ಅಂಜಲಿ ರಾವ್ ಹೇಳುತ್ತಾರೆ. "ಒಂದು ವಸ್ತುಸಂಗ್ರಹಾಲಯ, ಕ್ಯುರೇಟೆಡ್ ಪ್ರವಾಸಗಳು, ವಾರ್ಷಿಕ ಶೋಲೆ ಉತ್ಸವವೂ ಸಹ – ಏರ್ಪಾಡು ಮಾಡಿದಲ್ಲಿ ಇದು ಪ್ರಪಂಚದಾದ್ಯಂತ ಇರುವ ಶೋಲೆ ಚಿತ್ರರಸಿಕರ, ಪ್ರವಾಸಿಗರ ಮತ್ತು ಅಭಿಮಾನಿಗಳನ್ನು ಸೆಳೆಯಬಹುದಾಗಿರುತ್ತದೆ.

# ನನ್ನಂತಹವನಿಗೆ ಸಮಯವಿಲ್ಲ

**ಸ**ರಳವಾಗಿ ಓದಬಹುದಾದಂತ "ನನಗೆ ಸಮಯವಿಲ್ಲ" ಎಂಬ ಈ ಆಧುನಿಕ ಜಗತ್ತಿನ ರಾಕೆಟ್ ಯುಗದ ಯಂತ್ರ ಮಾನವನನ್ನು ಮೀರಿಸುವ ನಮ್ಮ ನವನಾಗರಿಕರ ಬವಣೆ ದಿನನಿತ್ಯ ಸಂಸಾರ ತಾಪತ್ರಯಗಳೊಂದಿಗೆ ಟ್ರಾಫಿಕ್ ಕೆಂಪು ಸಿಗ್ನಲ್ ದಾಟುವ ತವಕದಲ್ಲಿ 12 ಗಂಟೆಗಳ ಪ್ರಯಾಣ 4 ಗಂಟೆಗೇ ಕುಸಿದಿದೆ. ಆದರೂ ಮನುಷ್ಯನು ಹೇಳುತ್ತಾನೆ– ಸಮಯವಿಲ್ಲ. 12 ಜನರ ಕುಟುಂಬ 2 ಜನರಾಗಿದೆ. 2 ವಾರಗಳಲ್ಲಿ ತಲುಪುತ್ತಿದ್ದ ಸುದ್ದಿ ಈಗ 2 ಸೆಕೆಂಡ್‌ನಲ್ಲಿ ಲಭಿಸುತ್ತದೆ. ಒಮ್ಮೆ ವರ್ಷಗಟ್ಟಲೆ ಕಾಯಬೇಕಾಗಿದ್ದ ದೂರದ ಮುಖ ಈಗ ಕ್ಷಣಾರ್ಧದಲ್ಲಿ ಕಾಣುತ್ತದೆ. ಮನೆ ಸುತ್ತಲು ಬೇಕಿದ್ದ ಶ್ರಮ ಕ್ಷಣಗಳಲ್ಲಿ ಮುಗಿಯುತ್ತದೆ ಲಿಫ್ಟ್‌ನಿಂದ, ಗಂಟೆಗಳ ಕಾಲ ಬ್ಯಾಂಕ್ ಸಾಲಿನಲ್ಲಿ ನಿಂತಿದ್ದವನು, ಮೊಬೈಲ್‌ನಿಂದ ಕ್ಷಣಗಳಲ್ಲಿ ವಹಿವಾಟು ಮಾಡುತ್ತಾನೆ, ವಾರಗಳ ಕಾಲ ಬೇಕಿದ್ದ ವೈದ್ಯಕೀಯ ವರದಿ ಈಗ ಗಂಟೆಗಳಲ್ಲಿ ಸಿಗುತ್ತದೆ. ಇಂದಿನ ದೈನಂದಿನ ವ್ಯಂಗ್ಯಗಳು ಆಕ್ಟಿವಾದಲ್ಲಿ ಕೈಯೊಂದು ಹ್ಯಾಂಡಲ್ ಮೇಲೆ, ಮತ್ತೊಂದು ಫೋನ್‌ನಲ್ಲಿ ಯಾಕೆಂದರೆ ನಿಲ್ಲಲು ಅವನಿಗೆ



ಸಮಯವಿಲ್ಲ, ಕಾರು ಓಡಿಸುತ್ತಾ, ಒಂದು ಕೈ ಸ್ಟೀರಿಂಗ್ ಮೇಲೆ, ಇನ್ನೊಂದು ವಾಟ್ಸಾಪ್‌ನಲ್ಲಿ, ಟ್ರಾಫಿಕ್‌ನಲ್ಲಿ ಲೇನ್‌ಗಳನ್ನು ಬದಲಿಸಿ ಹೊಸದನ್ನು ಸೃಷ್ಟಿಸುತ್ತಾನೆ. ಯಾಕೆಂದರೆ ಅವನಿಗೆ ಸಮಯವಿಲ್ಲ. ಸ್ನೇಹಿತರ ಜೊತೆ ಕುಳಿತರೂ, ಬೆರಳುಗಳು ಫೋನ್‌ನಲ್ಲಿ ಬ್ಯುಸಿ, ಯಾಕೆಂದರೆ ಅವನಿಗೆ ಎಲ್ಲೋ ಹೋಗಬೇಕಿದೆ ಸಮಯವಿಲ್ಲ. ಒಬ್ಬನೇ ಇದ್ದಾಗ ಶಾಂತ, ಆದರೆ ಜನರ ಮುಂದೆ ಅಶಾಂತ ಯಾಕೆಂದರೆ ಅವನಿಗೆ ಸಮಯವಿಲ್ಲ. ಪುಸ್ತಕ ಓದಲು ತಾಯ್ತಂದೆಯರ ಜೊತೆ ಮಾತನಾಡಲು ಸ್ನೇಹಿತನನ್ನು ಭೇಟಿ ಯಾಗಲು ಪ್ರಕೃತಿಯನ್ನು ಅನುಭವಿಸಲು, ಕುಟುಂಬಕ್ಕೆ, ಊಟಕ್ಕೆ, ನಿದ್ರೆಗೆ ಅವನಿಗೆ ಸಮಯ ವಿಲ್ಲದ್ದು. ಆದರೆ ಅವನಿಗೆ ಸಮಯವಿರುವುದು..... IPL ನೋಡಲು, ನೆಟ್‌ಫ್ಲಿಕ್ಸ್ ನೋಡಲು, ಅರ್ಥವಿಲ್ಲದ ರೀಲ್ಸ್ ನೋಡಲು, ರಾಜಕೀಯವಾದ ವಿವಾದಗಳು, ಟಿವಿ ಕಡೆ ಶ್ರದ್ಧೆಯಿಂದ ವೀಕ್ಷಿಸಲು.

ಆದರೆ ತನಗೋಸ್ಕರ ಮಾತ್ರ ಸಮಯವಿಲ್ಲ. ವಾಸ್ತವಿಕ ಜಗತ್ತು ಸರಳವಾಯಿತು. ತಂತ್ರಜ್ಞಾನ ಹತ್ತಿರವಾಯಿತು. ದೂರಗಳು ಅಳಿದು ಹೋದವು. ಆರಾಮಗಳು ಹೆಚ್ಚಾದವು. ಅವಕಾಶಗಳು ವಿಸ್ತರಿಸಿದವು. ಆದರೂ ಮನುಷ್ಯನು 'ಸಮಯವಿಲ್ಲ" ಎಂದು ಹೇಳುತ್ತಾ ಸ್ವತಃ ತನ್ನಿಂದ ತಾನೇ ದೂರವಾಗಲು ನಾವು ಮರೆತಿದ್ದು, ಮೌನವಾಗಿ ಕುಳಿತುಕೊಳ್ಳುವುದು ತನ್ನೊಳಗೆ ಮಾತನಾಡುವುದು ತನ್ನನ್ನು ಅರ್ಥ ಮಾಡಿಕೊಳ್ಳುವುದು. ಶುದ್ಧವಾಗಿ ನಗುವುದು ಅವನಿಂದ ಆಗುವುದಿಲ್ಲವೇ? ಯಾಕೆಂದರೆ ಸಮಯವಿಲ್ಲ. ಅಂತಿಮ ಸತ್ಯ ಇಷ್ಟೆ, ಒಂದು ದಿನ ಸಮಯವೇ ಜಾರಿ ಹೋಗುತ್ತದೆ. ಆ ಕ್ಷಣದಲ್ಲಿ ಅವನು ಅರಿಯುತ್ತಾನೆ: "ಸಮಯವಿತ್ತು... ಆದರೆ ನಾನು 'ಸಮಯವಿಲ್ಲ' ಎಂದು ಹೇಳುತ್ತಾ ಬಾಳುವುದನ್ನೇ ಮರೆತಿದ್ದೆ." ಜನರ ಜತೆ ಶುದ್ಧ, ಶುಭ್ರ ಮನಸ್ಸಿನಿಂದ ಬೆರೆತು ಆ ಜೀವನದ ಕಾಲಘಟ್ಟವನ್ನು ಸವೆಯದ ನಿರರ್ಥಕಗೊಳಿಸಿದ್ದು ಬಾಲ್ಯ, ಯೌವ್ವನ, ಸಂಸಾರ ಸುಖ ಜೀವನ ಇಡೀ ವಯಸ್ಸಿನ ವರೆಗೂ ಉಳಿಯುವುದಿಲ್ಲವೆಂಬ ಕಟು ಸತ್ಯ ಅರಿಯದೆ ವ್ಯರ್ಥಗೊಳಿಸಿದ್ದು. ಸಂದೇಶ ಇಷ್ಟೆ. ಸ್ವಲ್ಪ ಸಮಯವನ್ನು ನಿನ್ನಗೋಸ್ಕರ ಇಟ್ಟುಕೋ, ಸ್ವಲ್ಪ ಸಮಯವನ್ನು ಸಂಬಂಧಗಳಿಗೆ ಕೊಡು, ಸ್ವಲ್ಪ ಬದುಕು ಮನಸ್ಸಿಗಾಗಲಿ, ಶಾಂತಿಗಾಗಲಿ, ಬದುಕಿನ ಅರ್ಥಕ್ಕಾಗಲಿ. ಬಿಡುವು ಮಾಡಿಕೊ. ಯಾಕೆಂದರೆ "ಸಮಯವಿಲ್ಲ" ಎನ್ನುವುದು ಸತ್ಯವಲ್ಲ. ಅದು ಕೇವಲ ಒಂದು ಅಭ್ಯಾಸ. ಅದನ್ನು ಬದಲಾಯಿಸಬೇಕು. ಹಾಗೂ ನಿನಗೋಸ್ಕರ ಈ ಕೃತಿಯ ಸಾಧನದ ಕೈಗೊಂಬೆಯಾಗಿದೆ. ನಿನ್ನ ಜೀವನ ಸಮಯವನ್ನು ತರ್ಕಬದ್ಧವಾಗಿ ಯೋಚಿಸಿ ಉಪಯುಕ್ತ ಕೆಲಸ ಕಾರ್ಯಗಳಿಗೆ ಹಂಚಿ.. ಜೀವನದ ಅತ್ಯಂತ ರಸಮಯ ಸಂದರ್ಭ ಸನ್ನಿವೇಶಗಳಿಗೆ ನಿನ್ನದೆ ಛಾಪು ಮೂಡಿಸುವ ಬಗ್ಗೆ ಯೋಚಿಸು. ಅವಕಾಶ ವಂಚಿತನಾಗದೆ ಮೌಲ್ಯಯುತ ಸಮಯವ ಸಂತೋಷಪಟ್ಟು ನಿನ್ನ ತನು, ಮನ, ಧನ ಪುಲಕಿತವಾಗುವಂತೆ, ನಡೆಯುವಂತೆ, ಹೆಜ್ಜೆ ಹಾಕುವಂತೆ, ನಿರ್ಧರಿಸುವ ಸಂಕಲ್ಪ ಮಾಡು.

# ವಾಣಿಜ್ಯ ಬೆಳೆಯಾಗಿ ಹಲಸು ಬೆಳೆಯಬಹುದೇ?

**ಸಾ**ಮಾನ್ಯವಾಗಿ ಈ ವರ್ಷದ ಹಲಸು ಸೀಸನ್ ಮುಕ್ತಾಯದ ಹಂತದಲ್ಲಿದೆ. ಆದರೆ ಬೆಂಗಳೂರಿನ ಅದೊಂದು ತೋಟದಲ್ಲಿ ಮಾತ್ರ ಭಾಗಶಃ ಈಗಲೂ ಹಲಸಿನ ಸಹಜ ಮೇಳ ನಡೆಯುತ್ತಲೇ ಇದೆ. ಮೇಳ ಎಂದರೆ ಎಲ್ಲೆಲ್ಲಿಂದಲೂ ಗಾಡಿ ಏರಿಸಿ ತಂದು ಕಡಿದಿಟ್ಟ ಹಣ್ಣಲ್ಲ, ಕಡೆದು ರುಬ್ಬಿ ಮಾಡಿದ ವ್ಯಂಜನಗಳ ಪ್ರದರ್ಶನವೂ ಅಲ್ಲ. ಸುಮಾರು 4,224 ಮರಗಳಲ್ಲಿ ಸಿದ್ದು, ಸಿಂದೂರ, ಚಂದ್ರ, ಶಂಕರ... ಅಬ್ಬಬ್ಬಾ 120 ಕ್ಕಿಂತಲೂ ಹೆಚ್ಚು ವೈವಿಧ್ಯಮಯ ತಳಿಗಳು. ಕೆಂಪು ಕೇಸರಿ ಹಳದಿ ಬಿಳಿ ತಿರುಳು.. ಒಂದಾ ಎರಡಾ? ಒಂದಷ್ಟು ತಿನ್ನುವಂತದ್ದು, ಕೆಲವು ತರಕಾರಿಗೆ, ಇನ್ನು ಕೆಲವು ಹಪ್ಪಳಕ್ಕೆ... ಹೀಗೆ ಬಣ್ಣ ಆಕಾರ ರುಚಿ ಸ್ವಾದ ಸುವಾಸನೆ ಎಲ್ಲದರಲ್ಲೂ ವೈವಿಧ್ಯತೆ ಇರುವ ರಾಜ್ಯದ ದೊಡ್ಡ ಹಲಸು ತೋಟ ಪ್ರಾಯಶಃ ಇದೇ ಇರಬಹುದೇನೋ?..

ಒಂದು ಕಾಲದಲ್ಲಿ ಕರಾವಳಿ ಮಲೆನಾಡಿನ ಅಡಿಕೆ ತೋಟದ ಎಡೆಗಳಲ್ಲಿ, ಘಟ್ಟದ ಮೇಲಿನ ಕಾಫಿ ತೋಟದ ಬದಿ ಬದಿಗಳಲ್ಲಿ ಮಂಗ ಆನೆ ಕಾಗೆ ಹಂದಿಗಳ ಪಾಲಾಗುತ್ತಿದ್ದ, ಬಿದ್ದು ಕೊಳೆತು ಹೋಗುತ್ತಿದ್ದ ಈ ಬಡವರ ಹಣ್ಣು ಹಲಸಿಗೆ ಮೌಲ್ಯವರ್ಧನೆಯ ಮಾನ ಸಿಕ್ಕಿದ ಮೇಲೆ ಇದೀಗ ಮಹಾನಗರಗಳ ಶ್ರೀಮಂತರ ಮಾಲ್‌ಗಳಲ್ಲಿ ಹಲಸು ಸ್ಥಾನ ಪಡೆದಿರುವುದು ನಿಮಗೆ ಗೊತ್ತೇ ಇದೆ. ಅಡಿಕೆ ಪತ್ರಿಕೆಯ ಶ್ರೀ ಪಡ್ರೆಯವರು ದೇಶ ವಿದೇಶಗಳ ಮೂಲೆ ಮೂಲೆಗಳಿಂದ ಹಲಸು ಮೌಲ್ಯ ವರ್ಧನೆಯ ರೋಚಕ ಕಥೆಗಳನ್ನು ಇನ್ನು ಹಂಚುತ್ತಲೇ ಇದ್ದಾರೆ. ಹಲಸು ವಿಶೇಷದ 20ನೇ ಕಂತನ್ನು ಕಳೆದ ತಿಂಗಳು ಅಡಿಕೆ ಪತ್ರಿಕೆ ಪ್ರಕಟಿಸಿದ್ದು ನಿಮಗೆ ಗೊತ್ತೇ ಇದೆ.

ಬೆಂಗಳೂರಿನ ದೊಡ್ಡಬಳ್ಳಾಪುರದಲ್ಲಿ ಅಶೋಕ್ ಕುಮಾರ್ ಕೆ.ಎಸ್ ಅವರ ಈ ಮೇಲಿನ ಹಲಸು ತೋಟದ ಹುಟ್ಟುಕತೆಯೇ ರೋಚಕ. ಮುಂದೆ ಕೆಲವೇ ವರ್ಷಗಳಲ್ಲಿ ವಿಸ್ತರಿಸುತ್ತಿರುವ ರಾಜಧಾನಿ ಬೆಂಗಳೂರಿನ ಭಾಗವೇ ಆಗಿ ಹೋಗಬಹುದಾದ, ಬಂಗಾರದ ಬೆಲೆ ಬರುವ ಭೂಮಿಯಲ್ಲಿ ಸಾವಿರ ಸಾವಿರ ಹಲಸುನೆಟ್ಟ ಈ ಕೃಷಿಕನ ಯಶೋಗಾಥೆ ಆರಂಭವಾಗುವುದು ಬರೀ ಹಲಸಿನಿಂದಲ್ಲ.

ಕೇವಲ ಹಲಸು ಒಂದನ್ನೇ ಮುಖ್ಯ ಬೆಳೆಯಾಗಿ ಬೆಳೆಸಿ ಗೆದ್ದವರ ಕಥೆ ಭಾರತದಲ್ಲಿ ತುಂಬಾ ಕಡಿಮೆ. ಹಾಗಂತ ಯಾರೂ ಮಾಡದ್ದನ್ನು ತಾನು ಮಾಡಬೇಕೆಂಬ ಘನ ಉದ್ದೇಶ ಅಶೋಕ ಅವರದ್ದೂ ಆಗಿರಲಿಲ್ಲ. 30 ವರ್ಷಗಳ ಹಿಂದೆ ನಿರಾಶ್ರಯವಿದ್ದು ಎಲ್ಲಾ ಕೃಷಿ ಬೆಳೆಗಳಿಗೂ ಯೋಗ್ಯವಾಗಿದ್ದ ಭೂಮಿ ಅದು. ದೊಡ್ಡಬಳ್ಳಾಪುರದ ಎರಡು ಮೂರು ಗ್ರಾಮಗಳಲ್ಲಿ ನೂರಕ್ಕಿಂತ ಹೆಚ್ಚು ಎಕ್ರೆ ಜಾಗವನ್ನು ಖರೀದಿಸಿ ಜೋಡಿಸಿ ಹೂವು ರೇಷ್ಮೆ ಅಡಿಕೆ ದ್ರಾಕ್ಷಿ ನರ್ಸರಿ ಇತ್ಯಾದಿ ಕೃಷಿಗಳನ್ನು ಯಶಸ್ವಿಯಾಗಿ ಮಾಡಿದ ಅಶೋಕ್ ಕುಮಾರ್ ಅನಿರೀಕ್ಷಿತವಾಗಿ ನೀರಿನ ವಿಷಯದಲ್ಲಿ ಸೋತಾಗ ಶತಾಯಗತಾಯ ತನ್ನ ಭೂಮಿ ಬರಡು ಬೀಳಲೇ ಬಾರದು, ನೀರಿಲ್ಲದ ಬೆಳೆಯನ್ನೇ ತಾನು ಆಯ್ದು ಕೃಷಿ ಮಾಡಬೇಕೆಂಬ ಅಧ್ಯಯನಕ್ಕೆ ತೊಡಗಿದರು.

229 ಬೋರ್‌ವೆಲ್ ಕೊರೆದರೂ ಪಾತಾಳ ಸೇರಿದ ಜಲ ಅನಿರೀಕ್ಷಿತವಾಗಿ, ಕೈ ಕೊಟ್ಟಾಗ ಬೇರೆ ಯಾರೇ ಆಗಿದ್ದರೂ ಈ ಅಡಿಗಳಷ್ಟು ಕೃಷಿಯೂ ಬೇಡ, ಊರೂ ಬೇಡ ಎಂದು ಬಿಟ್ಟು ಓಡುತ್ತಿದ್ದರು. ಕೃಷಿಯಲ್ಲೇ ಸ್ನಾತಕೋತ್ತರ ಪದವಿ ಪೂರೈಸಿದ,ಕರಾವಳಿ ಕೃಷಿಮೂಲ ಕುಟುಂಬದ, ಸದಾ ಅಧ್ಯಯನ ಶೀಲ ಕೃಷಿ ಪ್ರವಾಸಿ ಅಶೋಕ್ ಕುಮಾರ್



ಧೃತಿಗೆಡಲಿಲ್ಲ. ಊರು ಬಿಡಲಿಲ್ಲ ಅವರ ಬೆನ್ನಿಗೆ ನಿಂತ ಶ್ರೀಮತಿ ಮಂಜುಳಾ ಅವರ ಪ್ರೋತ್ಸಾಹದ ಮಾತುಗಳು ಸದಾ ಚೋದಕವಾಗಿದ್ದವು. ನೀರಿಲ್ಲದೆಯೂ ಬೆಳೆಯಬಹುದಾದ, ನೀರಿದ್ದೂ ಬೆಳೆಯುವ ಬೆಳೆ ಕೊಡುವಷ್ಟೇ ಆದಾಯ ಕೊಡ ಬಹುದಾದ ಕೃಷಿ ಯಾವುದೆಂದು ಹುಡುಕುತ್ತಿದ್ದಾಗ ಅಳೆದು ಸುರಿದು ಅವರು ಆಯ್ಕೆ ಮಾಡಿ ಕೊಂಡದ್ದು ಹಲಸು ಮಾವು ದೀವಿಹಲಸು ಅವಕಾಡೊ ಬೆಳೆಗಳನ್ನು ಬೆಲೆಯುವ ಮೂಲಕ ಈ ಕೃಷಿಗೆ ಇಳಿದರು.

ಭೂಮಿಯನ್ನು ಬರಡು ಬಿಡದೆ ಏನಾದರೂ ಒಂದು ಹಸಿರು ಹಚ್ಚಲೇಬೇಕೆನ್ನುವ ಸದುದ್ದೇಶದಿಂದ ಅಧ್ಯಯನಕ್ಕಾಗಿ ಅಶೋಕ್ ಕುಮಾರ್ ಓಡಾಡದ ದೇಶಗಳಿಲ್ಲ. ನೋಡದ ತೋಟಗಳಿಲ್ಲ, ಎಲ್ಲಿ ಹೋದರೂ ರಸ್ತೆ ಬದಿಯಲ್ಲಿ ಗಾಡಿ ನಿಲ್ಲಿಸಿ ನೀರು ಗೊಬ್ಬರಗಳಿಲ್ಲದೆ ಸಮೃದ್ಧ ಫಲ ಕಟ್ಟಿದ ಗಿಡಮರಗಳನ್ನು ತದೇಕ ಚಿತ್ತದಿಂದ ಗಮನಿಸುತ್ತಾ ಧ್ಯಾನಿಸುತ್ತಾ ಕೂತವರಿಗೆ ಜ್ಞಾನೋದಯವಾದದ್ದು ಬಡವರ ಹಣ್ಣಾದ ಹಲಸಿನ ಮರದ ಬುಡದಲ್ಲೇ.

ಯಾವುದನ್ನೂ ಬಯಸದ ಒಣಭೂಮಿ ಯಲ್ಲೂ ಹುಲುಸಾಗಿ ಬೆಳೆಯಬಲ್ಲ ಹಲಸನ್ನು ಆಯ್ಕೆ ಮಾಡಿ, ಇದೀಗ ರಾಜ್ಯದಲ್ಲಿ ಒಂದು ವ್ಯವಸ್ಥಿತ ಮಾದರಿ ತೋಟವನ್ನಾಗಿ ಮಾಡಿದ್ದಾರೆ. ಹೆಚ್ಚು ಗೊಬ್ಬರ ನೀರಿಲ್ಲದೆಯೂ ಸಹಜವಾಗಿಯೇ ಬೆಳೆ ಕಚ್ಚುವ ಹಲಸನ್ನು ಹಿತಮಿತ ಗೊಬ್ಬರ, ಪೋಷಣೆ,ರೆಂಬೆಕಸಿ, ಪ್ರತಿ ಮರಗಳಿಗೆ ಸಂಖ್ಯಾ ಅನುಕ್ರಮಣಿಕೆ, ಮಿಡಿನಿಯಂತ್ರಣ ಇವೆಲ್ಲವುಗಳ ಮೂಲಕ ಬೇರೆ ಕೃಷಿಕರಿಗೂ ಮಾದರಿ ಯಾಗಿದ್ದಾರೆ.

ಅತ್ಯಂತ ಬೇಡಿಕೆ ಇರುವ ಶಂಕರ, ಸಿದ್ದು, ಸಿಂಧೂರ ಮುಂತಾದ ಅಪರೂಪದ ರುಚಿಕರ ಹಲಸು ಎರಡು ಮೂರು ಕೆಜಿ ಕ್ಕಿಂತ ಹೆಚ್ಚು ತೂಗುವುದಿಲ್ಲ ಎನ್ನುವ ನಂಬಿಕೆಯಿದೆ. ಆದರೆ ಇವರ ತೋಟದಲ್ಲಿ ಆರೇಳು ಕೆಜಿ ತೂಗುವ ಕಾಯಿ-ಹಣ್ಣುಗಳಿವೆ. ಗೊಂಚಲುಗಳಲ್ಲಿ ಎಳೆ ಕಳ್ಳಿಗೆಗಳನ್ನೇ ನಿಯಂತ್ರಿಸಿದರೆ ಎಡೆಫಲದ ತೂಕ ಸಹಜವಾಗಿ ಬೆಳೆಯುತ್ತದೆ ಎನ್ನುತ್ತಾರೆ ಅಶೋಕ್ ಕುಮಾರ್. ಇವರ ಮಾ (maa) ಎಂಬ ತೋಟ ತುಂಬ ನಾಲ್ಕು ಸಾವಿರಕ್ಕಿಂತ ಹೆಚ್ಚಿರುವ ಪ್ರತಿ ಮರಗಳಿಗೂ ನಂಬರಿಂಗ್ ಮಾಡಲಾಗಿದೆ. ಇದರಿಂದ ಕ್ಷೀಣ ಮರಗಳನ್ನು ಗುರುತಿಸುವುದು, ಅವುಗಳಿಗೆ ವಿಶೇಷ ಪೋಷಣೆ ಮಾಡಿ ಪುನರು ತ್ಥಾನಗೊಳಿಸುವುದು ಸಾಧ್ಯ ಎನ್ನುತ್ತಾರೆ ಅಶೋಕ್.

ಬರೀ ಇಷ್ಟೇ ಅಲ್ಲ ಪ್ರತಿ ಮರದ ಗುಜ್ಜೆಗಳ ವಯಸ್ಸು- ದಿನದಾಖಲೆ ಇವರ ಕಚೇರಿಯಲ್ಲಿದೆ. 60, 70, 120 -140 ದಿನಗಳ ಕಾಯಿಗಳು, ಯಾವುದು ಬಿರಿಯಾನಿಗೆ, ಯಾವುದು ಹಪ್ಪಳಕ್ಕೆ, ಯಾವುದು ಹಣ್ಣಾಗಿದೆ ಈ ಎಲ್ಲ ಕರಾರುವಕ್ಕಾದ ಲೆಕ್ಕ ಇಲ್ಲಿ ದುಡಿಯುವ ಪ್ರತಿಯೊಬ್ಬ ಹುಡುಗರಿಗೂ ಗೊತ್ತಿದೆ. "ನೀರಿಲ್ಲದೆ ಬೆಳೆಯಬಹುದಾದ ಹಲಸನ್ನೇ ನಾನು ಆಯ್ಕೆ ಮಾಡಿಕೊಳ್ಳುವುದಕ್ಕೆ ಒಂದು ಕಾರಣ ನನ್ನ ಆಸ್ಟ್ರೇಲಿಯಾ ದೇಶದ ಪ್ರವಾಸ. ಅಲ್ಲಿ ಒಬ್ಬೊಬ್ಬ ರೈತರು 300 ರಿಂದ 400 ಎಕ್ರೆವರೆಗೆ ಹಲಸು, ಮತ್ತು ಹಲಸನ್ನೆ ಹೋಲುವ ದುರಿಯನ್ ಕೃಷಿ ಮಾಡಿದ್ದಾರೆ, ಒಂದೊಂದು ದುರಿಯುನ್ ಮರದಲ್ಲಿ ಒಂದೊಂದು ಸಾವಿರ ಡಾಲರು ಆದಾಯ ಪಡೆ ಯುವವರೂ ಇದ್ದಾರೆ. ಮಲೇಶಿಯಾ ವಿಯೆಟ್ನಾಂ ಮುಂತಾದ ದೇಶಗಳಲ್ಲಿ ಹಲಸಿನ ಅದ್ಭುತ ಮಾದರಿ ತಾಟುಗಳಿವೆ. ಗಿಡ-ಗಿಡಗಳ ನಡುವೆ ಹೆಚ್ಚು ಅಂತರ ಬಿಡದೆ ಪ್ರತಿವರ್ಷ ಕೊಂಬೆ ಕಸಿ ಮಾಡಿ ಗಿಡಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳು ತ್ತಾರೆ. ನಮ್ಮ ದೇಶಕ್ಕಿಂತ ಆ ದೇಶದ ಸುಧಾರಿತ ತಳಿಗಳ ವಿಶೇಷತೆ ಏನೆಂದರೆ ಅವು ಹಣ್ಣಿನ ರೂಪದಲ್ಲಿರಲಿ ಅಥವಾ ಬಿಚ್ಚಿ ಸೊಳೆಯನ್ನು ಪ್ಯಾಕೆಟಲ್ಲಿಟ್ಟು ಮಾರಲಿ ಅವು ಅಲ್ಲಿ ನೀರೂರದೆ ತಿನ್ನಲು ಗರಿಗರಿಯಾಗಿರುತ್ತದೆ. ಆದರೆ ನಮ್ಮಲ್ಲಿ ಅಂತಹ ಹಲಸು ತುಂಬಾ ಕಡಿಮೆ" ಎನ್ನುತ್ತಾರೆ ಅಶೋಕ್ ಕುಮಾರ್. ಈ ಮೇಲಿನ ದೇಶಗಳಲ್ಲಿ 300, 400 ಎಕ್ರೆ ಭೂಪ್ರದೇಶದಲ್ಲಿ ಹಲಸು ಕೃಷಿ ಮಾಡುವ ರೈತರಿದ್ದಾರೆ. ಮತ್ತು ಅಂತಹ ಆಸಕ್ತರಿಗೆ ಸರಕಾರವೇ ಅಲ್ಲಿ ಖಾಲಿ ಭೂಮಿಯನ್ನು ನೂರಾರು ವರ್ಷಕ್ಕೆ ಲೀಸಿಗೆ ಕೊಡುತ್ತದೆ. ನಮ್ಮ ದೇಶದಲ್ಲಿ ಲೀಸ್ ಬಿಡಿ, ಹಣಕೊಟ್ಟು ಖರೀದಿಸುವು ದಾದರೂ ನೂರು ಎಕರೆಗಿಂತ ಜಾಸ್ತಿ ಕೃಷಿ ಭೂಮಿ ರಿಜಿಸ್ಟ್ರೇಷನ್ ಆಗುವುದೇ ಇಲ್ಲ, ಕಾರ್ಖಾನೆಗಳಿ ಗಾದರೆ ಸರಕಾರವೇ ಅದೇ ರೈತರನ್ನ ಎಬ್ಬಿಸಿ ಸಾವಿರಾರು ಎಕ್ರೆ ಪರಭಾರೆ ಮಾಡುತ್ತದೆ. ಈ ಕಾರಣಗಳಿಗಾಗಿ ಈ ದೇಶದಲ್ಲಿ ದೊಡ್ಡ ರೈತರು ಇನ್ನು ಮುಂದೆ ಹುಟ್ಟಲು ಸಾಧ್ಯವೇ ಇಲ್ಲ, ದೊಡ್ಡ ಉದ್ಯಮಿಗಳು ಹುಟ್ಟಬಹುದೇ ಹೊರತು ದೊಡ್ಡ ರೈತರು ಇಲ್ಲಿ ಹುಟ್ಟಲಾರರು" ಎಂದು ವಿಷಾದ ದಿಂದಲೇ ಹೇಳುತ್ತಾರೆ ಅಶೋಕ್.

ರುಚಿಯೂ ಸೇರಿ ಇನ್ನಾವುದೇ ಆಕರ್ಷಣೆ ಯಿಲ್ಲದ ನಮ್ಮೂರ ಕಾಡುತೋಟದ ಹಲಸು ಹಣ್ಣುಗಳೆಲ್ಲ ಗಿರಾಕಿಗಳಿಲ್ಲದೆ ಬಿದ್ದು ಕೊಳೆತು ಮಣ್ಣಾಗುವ ಕಾಲದಲ್ಲಿ ಅಶೋಕ್ ಕುಮಾರ್ ಅವರ 'ಮಾ' ತೋಟದ ಹಣ್ಣು ಕೆಜಿಗೆ 100 ರಿಂದ 200 ರವರೆಗೆ ಬಿಕರಿಗೊಳ್ಳುತ್ತವೆ ಎಂದರೆ ನೀವೇ ಲೆಕ್ಕ ಹಾಕಿ. ಅವರ ತೋಟದ ಗೇಟಿಗೆ ಬಂದು ಸಿದ್ದು ಸಿಂಧೂರ ಶಂಕರ ಮುಂತಾದ ತಳಿಗಳನ್ನು ದೊಡ್ಡ ಪ್ರಮಾಣದಲ್ಲಿ ಜನ ಖರೀದಿಸುತ್ತಾರೆ ಎಂದರೆ ಆ ಹಲಸಿನ ರುಚಿ ಬಣ್ಣ ಸ್ವಾದ ಸುವಾಸನೆ ಬಳಕೆದಾರನಿಗೆ ಎಷ್ಟೊಂದು ಆಪ್ಯಾಯಮಾನವಾಗಿದೆ ಎಂಬುದನ್ನು ಗಮನಿಸಿ. ಆನ್‌ಲೈನ್‌ನಲ್ಲಿ ಬುಕಿಂಗ್ ನಡೆಯುತ್ತದೆ, ಕೊರಿಯರ್‌ನಲ್ಲಿ ಹಣ್ಣುಗಳನ್ನು ಬೇಕಾದ ಕಡೆ ರವಾನೆ ಮಾಡಲಾಗುತ್ತದೆ.ದೇಶವಿದೇಶದ ಮಾಲು ಗಳಿಗೂ ಇಲ್ಲಿಂದ ಹಲಸು ರವಾನೆಯಾಗುತ್ತದೆ. ಗ್ರಾಹಕರಿಗೆ ಕೊಡುವ ಬಿಲ್ಲಿನಲ್ಲಿ ಯಾವ ತಳಿಯ ಹಣ್ಣು ಎಂದು ಪ್ರತ್ಯೇಕವಾಗಿ ನಮೂದಿಸಲಾಗುತ್ತದೆ. ಅದಕ್ಕೆ ಕೊಡುವ ನಂಬರ್ ಸಂಕೇತ ಸಂಖ್ಯೆಯನ್ನು ಮುಂದೆ ನೀವು ರವಾನಿಸಿದರೆ ಅದೇ ಆ ಹಣ್ಣು ನಿಮ್ಮ ಮನೆ ಬಾಗಿಲಿಗೆ ಬರುತ್ತದೆ. ಬೆಂಗಳೂರಲ್ಲಿ ಇವರ ತೋಟದಿಂದ ಖಾಯಂ ಆಗಿ ಹಣ್ಣು ಮತ್ತು ತರಕಾರಿಗೆಂದು ಹಲಸು ಖರೀದಿಸುವ ಖಾಯಂ ಅಂಗಡಿಗಳೇ ಇವೆ.ಇಲ್ಲಿ ತರಕಾರಿಗೆ ಅಂದರೆ ಬಿರಿಯಾನಿ ಕಬಾಬು ಕಟ್ಲೆಟ್ಟು ಮಂಚೂರಿ ಮೊದಲಾದುಗಳಿಗೂ ಹೇಳಿ ಮಾಡಿಸಿದ ತಳಿಗಳಿವೆ.

ಅಶೋಕ್ ಕುಮಾರ್ ಹಲಸಿನ್ನು ಎಕ್ರೆಗೆ 40 ರಿಂದ 50 ಗಿಡಗಳನ್ನು ನೆಟ್ಟಿದ್ದಾರೆ. ಇಲ್ಲಿ ಸರಾಸರಿ ನೂರರಿಂದ 200 ಕಾಯಿ ಹಿಡಿಯುವ ಮರಗಳಿವೆ. ಸರಾಸರಿ ಒಂದು ಹಣ್ಣು ಐದು ಕೆಜಿ ತೂಗಿದರೆ ಮರ ಒಂದರಲ್ಲಿ 500 ಕೆಜಿ ಹಣ್ಣಾದರೆ ಕೆಜಿಗೆ ಬರೀ ರೂ. 50 ರ ಹಾಗೆ ಮಾರಾಟವಾದರೂ ಒಂದು ಮರ ಇಪ್ಪತ್ತು ಸಾವಿರಕ್ಕಿಂತ ಹೆಚ್ಚು ಆದಾಯ ತರಬಲ್ಲದು. ಎಕ್ರೆಗೆ ನಾಲ್ಕರಿಂದ ಐದು ಲಕ್ಷ ನೀರಾವರಿ ಇಲ್ಲದೆ ಲಾಭ ಪಡೆಯಬಹುದಾದ ಕೃಷಿ ಇದು ಎನ್ನುತ್ತಾರೆ ಅಶೋಕ್ ಕುಮಾರ್. " ನಾನು ಈವರೆಗೆ ಕೆಜಿಗೆ 25 ರೂಪಾಯಿಗಿಂತ ಕಡಿಮೆ ಯಾವ ಹಣ್ಣನ್ನು ಮಾರಿಲ್ಲ. ಸಾಮಾನ್ಯ ನಮ್ಮ ಹಳ್ಳಿಯ ಹಳದಿ ಹಲಸು ಕೂಡ ಇಲ್ಲಿ ಕೇಜಿಗೆ 30 ರೂಪಾಯಿಯಂತೆ ಮಾರಾಟ ವಾಗಿದೆ. ತರಕಾರಿ ಹಲಸಿನ ಬೇಡಿಕೆ ಹಣ್ಣಿಗಿಂತ ವೇಗವಾಗಿದೆ.ಕಳೆದ ವರ್ಷದವರೆಗೆ ವಾರಕ್ಕೆ 50 ಕೆಜಿ ಯಷ್ಟು ಖರೀದಿಸುವವರು ಈ ವರ್ಷ ನೂರಕ್ಕೆ ಏರಿಸಿಕೊಂಡಿದ್ದಾರೆ.

ಹಲಸಿನ ಕಾಯಿ- ಹಣ್ಣನ್ನು ಪುಡಿಮಾಡಿ ಮಾರಾಟ ಮಾಡುವ, ಹಲಸಿನ ವೈವಿಧ್ಯಮಯ ತಳಿಗಳ ಗಿಡಗಳನ್ನು ತಯಾರಿಸಿ ಮಾರುವ ನರ್ಸರಿಯೊಂದನ್ನು ಮಾಡುವ ಉದ್ದೇಶವು ಅಶೋಕರಿಗಿದೆ. ಹಲಸು ಮೌಲ್ಯವರ್ಧನೆ ಬಗ್ಗೆ ನಿಖರವಾದ ಮುಂದಾಲೋಚನೆ ಇರುವ ಅಶೋಕ್ ಈ ಕ್ಷೇತ್ರದಲ್ಲಿ ಇರುವ ವಿಪುಲ ಅವಕಾಶಗಳನ್ನು ದಾಖಲೆ ಸಮೇತ ತೆರೆದಿರು ತ್ತಾರೆ.

"ನೀವು ಈ ದೇಶದ ಯಾವುದೇ ಭಾಗಕ್ಕೆ ಹೋಗಿ ರಸ್ತೆ ಬದಿಯಲ್ಲಿ ಗಾಡಿ ನಿಲ್ಲಿಸಿ. ಅಲ್ಲಿ ಸಿಗುವ ಚಿಪ್ಸ್ ನ ಉತ್ಪಾದಕರು ಯಾರು ಯಾವ ಕಂಪನಿಯದ್ದು ಎಂದು ಗಮನಿಸಿ. ಬಹುತೇಕ ಎಲ್ಲವೂ ಕೆಲವೇ ಕೆಲವು ಉದ್ದಿಮೆದಾರರ ಕೈಯಲ್ಲಿದೆ. ಆ ಕ್ಷೇತ್ರಕ್ಕೆ ಇನ್ನೂ ನಮ್ಮ ಹಲಸು ಚಿಪ್ಸ್ ಪ್ರವೇಶ ಮಾಡಿಯೇ ಇಲ್ಲ. ನಮ್ಮ ದೇಶದ ಯಾವುದೇ ಊಟವಿರಲಿ, ಸಸ್ಯ ಮಾಂಸ ಹಾರವೇ ಇರಲಿ, ಆ ಊಟದ ಬಟ್ಟಲಲ್ಲಿ ಎರಡು ತುಂಡು ಹಪ್ಪಳ ಇದ್ದೇ ಇರುತ್ತದೆ. ಈ ದೇಶದಲ್ಲಿ ಎಷ್ಟು ಕೋಟಿ ಜನ ಇದ್ದಾರೋ ಅವರೆಲ್ಲ ಹಪ್ಪಳ ತಿಂದೇ ತಿಂದಿರುತ್ತಾರೆ, ಮುಂದೆಯೂ ತಿನ್ನುತ್ತಾರೆ. ಇವತ್ತು ನಮ್ಮ ದೇಶದಲ್ಲಿ ಇಜ್ಜತ್ ಹಪ್ಪಳದ್ದೇ ಪ್ರಾಬಲ್ಯ.ಒಂದು ವೇಳೆ ಆ ಕ್ಷೇತ್ರಕ್ಕೂ ನಮ್ಮ ಹಲಸು ಪ್ರವೇಶ ಮಾಡಿದರೆ ಅಲ್ಲಿಂದಲೇ ಈ ಕೃಷಿಗೆ ಶುಕ್ರದೆಸೆ ಆರಂಭವಾಗುತ್ತದೆ. ನಾವಿನ್ನೂ ಚಿಪ್ಸ್- ಹಪ್ಪಳ ಕ್ಷೇತ್ರಕ್ಕೆ ಪ್ರವೇಶ ಮಾಡಿಯೇ ಇಲ್ಲ, ಆ ಉದ್ದಿಮೆ ಪ್ರತಿ ವರ್ಷ ಸರಾಸರಿ 12ರಷ್ಟು ಪ್ರಮಾಣದಲ್ಲಿ ಏರಿಕೆ ಕಾಣುತ್ತಿದೆ. ಹಾಗೆಯೇ ಮಾಂಸಕ್ಕಿರುವ ರುಚಿ ಸ್ವಾದ ಪೌಷ್ಟಿಕತೆ ಕಾಯಿ ಹಲಸಿನಕಾಯಿ ಗುಜ್ಜೆಯಲ್ಲೂ ಇದೆ.ಈಗಾಗಲೇ ಪ್ರಸಿದ್ಧ ಸ್ಟಾರ್ ಹೋಟೆಲ್‌ಗಳಲ್ಲಿ ಗುಜ್ಜೆ ಬಿರಿಯಾನಿ ಕಬಾಬ್ ಆರಂಭವಾಗಿದೆ.ಗೋವದಲ್ಲಿ ಒಬ್ಬರು ಹಲಸಿನ ಕಟ್ಲೆಟ್ ಮಾಡಿ ಕಂಟೇನರ್‌ಗಳಲ್ಲಿ ಅಮೆರಿಕಕ್ಕೆ ರಫ್ತು ಮಾಡುತ್ತಿದ್ದಾರೆ. ಹೀಗೆ ಅವಕಾಶ ಮುಕ್ತವಾಗಿರುವ ಹಲಸು ಭವಿಷ್ಯದಲ್ಲಿ ಒಳ್ಳೆಯ ಕೃಷಿಯಾಗಿ ಚೇತರಿಸಿಕೊಳ್ಳುವುದರಲ್ಲಿ ಯಾವ ಅನುಮಾನವೂ ಇಲ್ಲ ಎನ್ನುತ್ತಾರೆ" ಅಶೋಕ್ ಕುಮಾರ್. ಬರಿ ಹಲಸು ಒಂದೇ ಅಲ್ಲ ಕೋಳಿ ಸಾಕಣೆ ಕೋಳಿ ಮರಿ ಉತ್ಪಾದನೆ, ತಾಳೆ ಕೃಷಿ ಯಲ್ಲೂ ಅಶೋಕ್ ಕುಮಾರ್ ಇಡೀ ರಾಜ್ಯಕ್ಕೆ ಮಾದರಿಯಾಗುವ ಮಟ್ಟದಲ್ಲಿ ಬೆಳೆದಿದ್ದಾರೆ ಬೆಳೆಯುತ್ತಿದ್ದಾರೆ.

**-ನರೇಂದ್ರ ರೈ ದೇರ್ಲರವರ**
**ಮಾ-ತೋಟದ ಮಾದರಿ ಹಲಸಿಗೊಂದು ದಾರಿ ಲೇಖನ**

# ಭಾರತದ ಮೊಟ್ಟ ಮೊದಲ ಮಹಿಳಾ ಇಂಜಿನಿಯರ್





**ಮ**ದ್ರಾಸ್, 1930ರ ದಶಕದಲ್ಲಿ 15ನೇ ವಯಸ್ಸಿನಲ್ಲಿ ಒಬ್ಬ ಶ್ರೀಮಂತ ಕುಟುಂಬದ ವ್ಯಕ್ತಿಯೊಂದಿಗೆ ಮದುವೆ, 18ರಲ್ಲೇ ತಾಯಿ, ಮಗುವು ಜನಿಸಿದ ನಾಲ್ಕು ತಿಂಗಳಲ್ಲೇ ವಿಧವೆ. ಹದಿಹರೆಯದ ವಯಸ್ಸಿನಲ್ಲಿ ಜೀವನದ ಒಂದೊಂದು ಮೈಲಿಗಲ್ಲಿನಲ್ಲಿ ಅಘಾತ, ಆಶ್ಚರ್ಯ ಆದರೂ ಜಗತ್ತು ನೀಡುವ ಈ ಪೆಟ್ಟುಗಳಿಗೆ ಪ್ರಶ್ನೆಗಳಿಲ್ಲ, ಉತ್ತರಗಳಿಲ್ಲ. ಆದರೆ ಅವಳ ಜೀವನದ ಈ ಕಥೆಗೆ ನಿಶ್ಯಬ್ಧ ಅಲ್ಲಿಗೆ ಜೀವನ ಮುಗಿದಿಲ್ಲ. ಅಲ್ಲಿಂದಲೇ ಆರಂಭ ವಾಯಿತು. ಅವಳ ತಂದೆ ಪ್ರೊ. ಪಪ್ಪು ಸುಬ್ಬ ರಾವ್– ಅವಳ ಕಣ್ಣುಗಳಲ್ಲಿ ಕಂಗೊಳಿಸಿದ ಜೀವಸೆಲೆಯ ಕಿರಣವನ್ನು ಕಂಡರು. ಅವರು ಆಕೆಯನ್ನು ಸಮಾಧಾನಪಡಿಸಲಿಲ್ಲ, ಹೀಯಾಳಿಸಲಿಲ್ಲ. ಅವಳ ಭವಿಷ್ಯವನ್ನು ಮತ್ತೆ ಕಟ್ಟೋಣವೆಂದು ಪ್ರಾರಂಭಿಸಲು ಯೋಚಿಸಿದರು, ಯೋಜಿಸಿದರು.

ಅವಳನ್ನು ಅಂದಿನ ಮದ್ರಾಸ್ ರಾಜ್ಯದ ಪ್ರಸಿದ್ಧ ಗಿಂಡಿ ಇಂಜಿನಿಯರಿಂಗ್ ಕಾಲೇಜಿಗೆ ಕರೆದುಕೊಂಡು ಹೋದರು. ಅದು ಪುರುಷರ ಕೋಟೆಯಂತೆ ಇತ್ತು. 1943ವರೆಗೂ ಅವಳು ಬರುವವರೆಗೆ ಅಲ್ಲಿ ಯಾವ ಮಹಿಳೆಯೂ ಹೆಜ್ಜೆ ಇಟ್ಟಿರಲಿಲ್ಲ. ಅಂದಿನ ಭಾರತದಲ್ಲಿ ಇಂಜಿನಿಯರ್ ವ್ಯಾಸಾಂಗದ ಪ್ರವೇಶಕ್ಕೆ ಯಾವುದೇ ಮೀಸಲು ಇರಲಿಲ್ಲ. ಯಾರಿಂದಲೂ ಮಹಿಳಾ ಶಿಕ್ಷಣಕ್ಕೆ ಒತ್ತು ನೀಡುವ ಅಭಿಯಾನ ಇರಲಿಲ್ಲ. ಗಂಡು ಹುಡುಗರ ಮಧ್ಯೆಯೇ ಇಂಜಿನಿಯರಿಂಗ್ ವ್ಯಾಸಾಂಗ ಮುಂದುವರಿಸಿದರು.

ಆದರೆ ಹದಿನೆಂಟರ ಬಾಲೆ ಕೇವಲ ತನ್ನ ಧೈರ್ಯ, ಬುದ್ಧಿವಂತಿಕೆ ಸತತ ಪ್ರಯತ್ನದಿಂದ, ವಿದ್ಯುತ್ ವಿಷಯದಲ್ಲಿ ಇಂಜಿನಿಯರಿಂಗ್ ಪಾಸಾಗಿದ್ದಳು. ಅವಳು ಕೆಲಸಕ್ಕಾಗಿ ಹುಡುಕಾಡುತ್ತಿದ್ದಾಗ ಭಾಕ್ರಾ ನಾಂಗಲ್ ಅಣೆಕಟ್ಟಿನ ವಿದ್ಯುತ್ ಇಲಾಖೆಯಲ್ಲಿ ಕೆಲಸ ಸಿಕ್ಕಿತು. ಅಲ್ಲಿ ವಿದ್ಯುತ್ ಮಾರ್ಗಗಳನ್ನು ವಿನ್ಯಾಸಗೊಳಿಸುವ ಕಾರ್ಯಭಾರವು ಅವಳ ಮಡಿಲಿಗೆ ಬಿತ್ತು. ಮೂರು ದಶಕಗಳ ಕಾಲ AEI, ಕೋಲ್ಕತ್ತಾದಲ್ಲಿ ಇದ್ದ ವಿದ್ಯುತ್ ವ್ಯವಸ್ಥೆಗಳ ವಿಭಾಗದಲ್ಲಿ ಕೆಲಸಕ್ಕೆ ಸೇರಿಕೊಂಡು ಕೊಲ್ಕತ್ತಾ ಮತ್ತು ಪಶ್ಚಿಮ ಬಂಗಾಲ ರಾಜ್ಯದ ವಿದ್ಯುತ್ ವಿಭಾಗಕ್ಕೆ ಸತತ ಸೇವೆ ನೀಡಿದ್ದು ಕಂಡು ಬ್ರಿಟಿಷ್ ಎಂಜಿನಿಯರಿಂಗ್ ಕಂಪನಿಯು ಇವರ ಸಲಹೆ ಸೂಚನೆಗಳನ್ನು ಸ್ವೀಕರಿಸುವ ಮಟ್ಟಿಗೆ ಬೆಳೆದರು.

ಬ್ರಿಟಿಷ್ ತಂತ್ರಜ್ಞಾನ ಮತ್ತು ಸ್ವತಂತ್ರ ಭಾರತೀಯ ಕನಸುಗಳನ್ನು ಸೇರ್ಪಡೆಗೊಳಿಸಿ ಸಫಲರಾದರು. ಆಗತಾನೆ ಸ್ವತಂತ್ರವಾದ ಆಧುನಿಕ ಭಾರತವು ಕೊಡವಿಕೊಂಡು ನಿಲ್ಲುವ ಸಮಯದಲ್ಲಿ ವಿಧವೆ ಪ್ರಯಾಣಿಸಬಾರದು ಎಂಬ ಕಟ್ಟುಪಾಡಿಗೆ ಬಿದ್ದು ಮಹಿಳೆಯರಿಗೆ ಅದರಲ್ಲೂ ವಿಧವೆಯರಿಗೆ ಸ್ಥಳ ಪರಿಶೀಲನೆಗಳಿಗೆ ಅವಕಾಶ ಕೊಡಲಿಲ್ಲವಾದರು ಅವರು ತನ್ನ ಬುದ್ಧಿಮತ್ತೆಯಿಂದ ಅಪಾರ ಕೌಶಲ್ಯತೆ ಧಾರೆಯೆರೆದು ವಿದ್ಯುತ್ ಪರಿಕರಣಗಳಲ್ಲಿ ವಿದ್ಯುತ್ ಅಭಿವೃದ್ಧಿಪಡಿಸಿದ್ದನ್ನು ನೋಡಿ ಅವರನ್ನೇ ರಾಯಭಾರಿಯನ್ನಾಗಿ ಮಾಡಿ ಪ್ರತಿನಿಧಿಸುವಂತೆ ತನ್ನ ಅಗಾಧ ಪ್ರತಿಭಾನ್ವಿತೆ ಯಿಂದ ಇಂಜಿನಿಯರಿಂಗ್ ವಿಭಾಗದಲ್ಲಿ ಉತ್ಕೃಷ್ಟ ಕಾರ್ಯಕ್ರಮಗಳನ್ನು ನಿರ್ವಹಿಸಿದ್ದರು. ಕೇವಲ ನಿಖರತೆ, ಒಪ್ಪಿಗೆ ಕೇವಲ ಕಾರ್ಯಕ್ಷಮತೆ, ಯಶಸ್ವಿಯೂ ಪ್ರಶಂಸೆಯಾಯಿತು. 1964ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ಇಂಜಿನಿಯರ್ ಮತ್ತು ವಿಜ್ಞಾನಿಗಳ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದರು. 1966ರಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಎಲೆಕ್ಟ್ರಿಕಲ್ ಇಂಜಿನಿಯರ್ಸ್, ಲಂಡನ್‌ನ ಪೂರ್ಣ ಸದಸ್ಯತ್ವ ನೀಡಿ ಗೌರವಿಸಿದರು.

ಇದು ಕೇವಲ ಭಾರತೀಯ ಮಹಿಳೆಯ ಕಥೆಯಲ್ಲ. ಒಬ್ಬ ಭಾರತೀಯ ಮಹಿಳೆಗೆ ದಕ್ಕಿದ ಒಂದು ಮನ್ನಣೆ ಮತ್ತು ಗೌರವ. ಆದರೆ ಪಠ್ಯಪುಸ್ತಕಗಳು ಅವಳ ಹೆಸರನ್ನು ಉಲ್ಲೇಖಿಸುವುದು ಮರೆತವು. ಇತಿಹಾಸ ಅವರ ಪ್ರತಿಭೆಯ ಬೆಳಕನ್ನು ಮಂದಗೊಳಿಸಿತ್ತು. ವಿದ್ಯುತ್ ಸ್ಥಾವರ ಅಣೆಕಟ್ಟುಗಳು ಮತ್ತು ಗ್ರೀಡ್ ಗಳು ಅವಳ ಕಾರ್ಯವನ್ನು ಇಂದಿಗೂ ನೆನಪಿಸಿಕೊಳ್ಳು ತ್ತವೆ ಆದರೆ ಹೆಸರನ್ನು ಉಲ್ಲೇಖಿಸುವುದಿಲ್ಲ. ಆದುದರಿಂದ ಮುಂದೊಮ್ಮೆ ಯಾರಾದರೂ 'ಇಂಜಿನಿಯರಿಂಗ್ ಯಾವಾಗಲೂ ಪುರುಷರ ಲೋಕವೇ?' ಅಂತ ಕೇಳಿದರೆ ನೀವು ನಗುತ್ತಾ ಚುರುಕಾಗಿ ಹೇಳಿ: "ಸರ್ಕಾರದ ನೀತಿಗಳು, ಸಮಿತಿಗಳು ಬರೋ ಮೊದಲೇ ಅವಳು ಭಾರತದ ವಿದ್ಯುತ್ ರಂಗದಲ್ಲಿ ದಾಖಲೆಗಳನ್ನೇ ಮುರಿದಳು". ಅವಳ ಹೆಸರು ಅಯ್ಯಲ ಸೋಮಯಾಜುಲ ಲಲಿತಾ. ಭಾರತದ ಮೊದಲ ಮಹಿಳಾ ಇಂಜಿನಿಯರ್. ನೆನಪಿಡಿ: ಇದೊಂದು ಮಹಿಳೆಯ ಯಶೋಗಾಥೇಯಲ್ಲ ಛಲದಿಂದ ಸಾಧಿಸಿದ ಬದುಕಿನ ಸುವರ್ಣಗಾಥೆ ಮತ್ತು ಮುಂದಿನ ಪೀಳಿಗೆಗೆ ಸ್ಫೂರ್ತಿಯ ಚಿಲುಮೆ.

# ಅಯೋಧ್ಯೆ ದೀಪೋತ್ಸವಕ್ಕೆ ಸಿದ್ಧತೆ: ಸರಯೂ ಘಾಟ್‌ಗಳಲ್ಲಿ 28 ಲಕ್ಷ ದೀಪಗಳಿಂದ ಹೊಸ ವಿಶ್ವದಾಖಲೆಯತ್ತ

**ಜ**ನ್ಮಭೂಮಿ ಅಯೋಧ್ಯೆಯು ಈ ಬಾರಿಯ ದೀಪಾವಳಿಯನ್ನು ಜನಮಾನಸದಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತೆ ಆಚರಿಸಲು ಸಜ್ಜಾಗಿದೆ.



ಒಂಬತ್ತನೇ ಆವೃತ್ತಿಯ ದೀಪೋತ್ಸವ'ದ (Deepotsav) ಅಂಗವಾಗಿ, ಅಕ್ಟೋಬರ್ 19ರಂದು ಸರಯೂ ನದಿಯ (Saryu River) ಘಾಟ್‌ಗಳ ಉದ್ದಕ್ಕೂ 28 ಲಕ್ಷ ಮಣ್ಣಿನ ದೀಪಗಳನ್ನು (ದೀಪ) ಬೆಳಗಿಸುವ ಮೂಲಕ ಹೊಸ ವಿಶ್ವ ದಾಖಲೆ ನಿರ್ಮಿಸಲು ರಾಜ್ಯ ಸರ್ಕಾರ ಗುರಿ ಹೊಂದಿದೆ ಎಂದು ಮಾಧ್ಯಮಗಳು ವರದಿ ಮಾಡಿದೆ.

ಸರ್ಕಾರದ ಅಧಿಕೃತ ಮಾಹಿತಿಯ ಪ್ರಕಾರ, ಈ ಬಾರಿ ಕಳೆದ ವರ್ಷದ 22 ಲಕ್ಷ ದೀಪಗಳ ದಾಖಲೆಯನ್ನು ಮುರಿಯುವುದು ಆಡಳಿತದ ಉದ್ದೇಶವಾಗಿದೆ. ದೀಪೋತ್ಸವದ ಪ್ರಮುಖ ಕಾರ್ಯಕ್ರಮದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ (Yogi Adityanath) ಅವರು ಪಾಲ್ಗೊಳ್ಳಲಿದ್ದು, ಹಲವು ಗಣ್ಯರು, ಹಿರಿಯ ಅಧಿಕಾರಿಗಳು ಮತ್ತು ಧಾರ್ಮಿಕ ಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿರಲಿದ್ದಾರೆ.

ರಾಮ ಜನ್ಮಭೂಮಿಗೆ ಸಂಬಂಧಿಸಿದ ಹೊಸ ಅಭಿವೃದ್ಧಿ ಯೋಜನೆಗಳಿಗೆ ಮುಖ್ಯಮಂತ್ರಿಗಳು ಚಾಲನೆ ನೀಡುವ ನಿರೀಕ್ಷೆಯಿದೆ. 14 ವರ್ಷಗಳ ವನವಾಸದ ನಂತರ ಶ್ರೀರಾಮನು ಅಯೋಧ್ಯೆಗೆ ಮರಳಿದ ಸಂಕೇತವಾಗಿ ಈ ದೀಪೋತ್ಸವವನ್ನು ಆಚರಿಸಲಾಗುತ್ತದೆ. ಈ ವಿಶಿಷ್ಟ ಬೆಳಕಿನ ಸಂಭ್ರಮವು ಅಯೋಧ್ಯೆಯ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ವೈಭವವನ್ನು ಜಗತ್ತಿಗೆ ಪರಿಚಯಿಸಲಿದೆ.

ಈ ಬೃಹತ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸ್ಥಳೀಯ ಕಾಲೇಜುಗಳಿಂದ ಸಾವಿರಾರು ವಿದ್ಯಾರ್ಥಿಗಳು ಮತ್ತು ಸ್ವಯಂಸೇವಕರನ್ನು ಒಟ್ಟುಗೂಡಿಸಲಾಗುತ್ತಿದೆ. ಇವರು ದೀಪಗಳನ್ನು ಬೆಳಗಿಸಲು ಮತ್ತು ಅವುಗಳನ್ನು ನಿರ್ವಹಿಸಲು ಶ್ರಮಿಸಲಿದ್ದಾರೆ. 2017ರಲ್ಲಿ ಆರಂಭವಾದ ಈ ದೀಪೋತ್ಸವವು ಅಯೋಧ್ಯೆಯ ಆಧ್ಯಾತ್ಮಿಕ ಪುನರುಜ್ಜೀವನದ ಸಂಕೇತವಾಗಿ ಜಾಗತಿಕ ಗಮನ ಸೆಳೆದಿದೆ.

ದೀಪಾಲಂಕಾರದ ಮುಖ್ಯ ಕಾರ್ಯಕ್ರಮದ ಜೊತೆಗೆ, ಆ ದಿನದಂದು ಸಾಂಸ್ಕೃತಿಕ ಪ್ರದರ್ಶನಗಳು, ರಾಮಲೀಲಾ (Ram Leela) ಪ್ರದರ್ಶನಗಳು, ಲೇಸರ್ ಶೋಗಳು ಮತ್ತು ಸುಡುಮದ್ದುಗಳ ಪ್ರದರ್ಶನಗಳು ನಡೆಯಲಿವೆ. ಇದು ದೀಪಾವಳಿ ಹಬ್ಬಕ್ಕೆ ಒಂದು ಸ್ಮರಣೀಯ ಮುನ್ನುಡಿಯಾಗಲಿದೆ.

ಆಡಳಿತವು ಭದ್ರತೆ ಮತ್ತು ಸಂಚಾರ ವ್ಯವಸ್ಥೆಗಳನ್ನು ಬಲಪಡಿಸಿದ್ದು ಸಂದರ್ಶಕರು ವ್ಯವಸ್ಥಿತವಾಗಿ ಮತ್ತು ಪರಿಸರ ಸ್ನೇಹಿ ರೀತಿಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದೆ. ದೀಪೋತ್ಸವವು ಕೇವಲ ಧಾರ್ಮಿಕ ಕಾರ್ಯಕ್ರಮವಾಗದೆ ಜನ ಕಲ್ಯಾಣೋತ್ಸವ ಮತ್ತು ಶ್ರೀರಾಮನ ಭಕ್ತಿ ಸಮರ್ಪಣೆಯ ತಾಣವಾಗಲಿದೆ.

ಆಡಳಿತವು ಭದ್ರತೆ ಮತ್ತು ಸಂಚಾರ ವ್ಯವಸ್ಥೆಗಳನ್ನು ಬಲಪಡಿಸಿದ್ದು, ಸಂದರ್ಶಕರು ವ್ಯವಸ್ಥಿತವಾಗಿ ಮತ್ತು ಪರಿಸರ ಸ್ನೇಹಿ ರೀತಿಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದೆ. ದೀಪೋತ್ಸವವು ಕೇವಲ ಧಾರ್ಮಿಕ ಆಚರಣೆಯಲ್ಲ, ಇದು ಅಯೋಧ್ಯೆಯನ್ನು ಪರಂಪರೆ ಮತ್ತು ಭಕ್ತಿಯ ಜಾಗತಿಕ ಕೇಂದ್ರವಾಗಿ ಪರಿವರ್ತಿಸುತ್ತಿರುವ ಬೃಹತ್ ಪ್ರಯತ್ನವನ್ನು ಪ್ರತಿಬಿಂಬಿಸುತ್ತದೆ.

# ಕರ್ನಾಟಕ ಜನಸಮೀಕ್ಷೆ – ಇದು ಬೇಕಿತ್ತೆ?

**ರಾ**ಜ್ಯದ ಸಾಮಾಜಿಕ ಹಾಗೂ ರಾಜಕೀಯ ವಲಯದಲ್ಲಿ ಭಾರಿ ಸಂಚಲನ ಮೂಡಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಸೋಮವಾರ ದಿನಾಂಕ : 22.09.2025 ರಿಂದ ರಾಜ್ಯಾದ್ಯಂತ ಆರಂಭವಾಗಿದೆ. ಮೇ 13, 2023 ರಂದು ವಿಧಾನಸಭೆಗೆ ನಡೆದ 14ನೇ ಮಹಾ ಚುನಾವಣೆಯಲ್ಲಿ ಅಚ್ಚರಿಯ ಫಲಿತಾಂಶದೊಂದಿಗೆ 136 ಕಾಂಗ್ರೆಸ್ ಶಾಸಕರು ಆಯ್ಕೆಯಾಗಿ ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ತನ್ನದು ಜನಪ್ರಿಯ ಸರ್ಕಾರವೆಂದು ಛಾಪು ಮೂಡಿಸುವ ಪ್ರಯತ್ನವನ್ನು ಮಾಡುತ್ತಾ ಮಗದೊಮ್ಮೆ ಹಿಂದುಳಿದ ಅಲ್ಪಸಂಖ್ಯಾತರ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರ ಸಾಮಾಜಿಕ ಜೀವನ ಸುಧಾರಿಸಲು ಸರ್ಕಾರದ ಸವಲತ್ತುಗಳನ್ನು ಹಂಚಲು ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರದ ಸಂಪನ್ಮೂಲಗಳನ್ನು ಮತ್ತು ಆಯವ್ಯಯವನ್ನು ವಿಭಾಗಿಸಲು ಜಾತಿಗಣತಿಯ ನೆಪದಲ್ಲಿ ರಾಜ್ಯದ ಸಾಮಾಜಿಕ ಹಾಗೂ ರಾಜಕೀಯ ವಲಯದಲ್ಲಿ ಭಾರಿ ಸಂಚಲನ ಮೂಡಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗಳನ್ನು ಕೈಗೊಂಡಿದೆ. ಇದು ರಾಜಕೀಯ ರಂಗದಲ್ಲೂ ಮತ್ತು ಸಾರ್ವಜನಿಕ ವಲಯದಲ್ಲೂ ಸಾಕಷ್ಟು ಚರ್ಚೆ, ವಿವಾದ ಮತ್ತು ವಿರೋಧಕ್ಕೆ ಎಡೆಮಾಡಿಕೊಟ್ಟಿದೆ. ಸಾರ್ವಜನಿಕರು ಮುಕ್ತವಾಗಿ ಈ ಸಮೀಕ್ಷೆಯಲ್ಲಿ ಭಾಗವಹಿಸಲು ಹಿಂದೇಟು ಮಾಡುತ್ತಿದ್ದರು ಸರ್ಕಾರದ ಒತ್ತಾಸೆಯಿಂದ ಸಮೀಕ್ಷೆಯು ಕುಂಟುತ್ತಾ, ತೆವಳುತ್ತಾ ಪೂರ್ಣಗೊಳ್ಳುವ ಹಂತದಲ್ಲಿದೆ.



ಸುಮಾರು 1.75 ಲಕ್ಷ ಶಿಕ್ಷಕರು ಸಮೀಕ್ಷಕರಾಗಿ 2 ಕೋಟಿಗೂ ಹೆಚ್ಚು ಮನೆಗಳಿಗೆ ಭೇಟಿ ನೀಡಿ 7 ಕೋಟಿ ಜನರ ದತ್ತಾಂಶ ಸಂಗ್ರಹಿಸಬೇಕಾಗಿದ್ದು ಇದು ರಾಜ್ಯದ ಜನರ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿಯನ್ನು ತಿಳಿಯಲು ಪೂರಕವಾದ 60 ಪ್ರಶ್ನೆಗಳಿಗೆ ಸಮೀಕ್ಷಕರು ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಬಿಬಿಎಂಪಿ) ವ್ಯಾಪ್ತಿಯಲ್ಲಿ ತಡವಾಗಿ 03.10.2025ರಿಂದ ಶಿಕ್ಷಕರು ಹಾಗೂ ಇತರರಿಗೆ ತರಬೇತಿ ಮತ್ತು ಸಮೀಕ್ಷೆ ಪ್ರಾರಂಭವಾಗಿದೆ. ಹಾಗಾಗಿ ಸಮೀಕ್ಷೆ ಮುಕ್ತಾಯದ ಅವಧಿ ಸಹ ಅ.7ರ ಬದಲಿಗೆ ದಿನಾಂಕ: 18.10.2025ರವರೆಗೆ ವಿಸ್ತರಣೆಯಾಗಿರುತ್ತದೆ.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ ನಾಯ್ಕ್, "ಆಯೋಗವು ಸೆ.22ರಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಆರಂಭಿಸಿದ್ದು, ಇದು ಜಾತಿಗಣತಿ ಅಥವಾ ಜಾತಿ ಸಮೀಕ್ಷೆಯಲ್ಲ. ಸಮೀಕ್ಷೆಗೆ ಎಲ್ಲರ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಎಲ್ಲರೂ ಸಹಕರಿಸಬೇಕು," ಎಂದು ಮನವಿ ಮಾಡಿದರು.

“ಈಗಾಗಲೇ ಗೃಹಬಳಕೆ ವಿದ್ಯುತ್ ಮೀಟರ್ ಸಂಪರ್ಕ ಆಧರಿಸಿ 2 ಕೋಟಿಗೂ ಹೆಚ್ಚು ಮನೆಗಳನ್ನು ಗುರುತಿಸಿ ಜಿಯೋಟ್ಯಾಗಿಂಗ್ ಮಾಡಿ ಗಣತಿಯ ಬ್ಲಾಕ್‌ನ ನಕ್ಷೆ ರೂಪಿಸುವ ಪೂರ್ಣಗೊಂಡಿದೆ. ಇದರಿಂದ ಸಮೀಕ್ಷಕರು ಸುಲಭವಾಗಿ ಮನೆಗಳನ್ನು ತಲುಪಿ ಸಮೀಕ್ಷೆ ನಡೆಸಲು ನೆರವಾಗಲಿದೆ. ಒಬ್ಬ ಸಮೀಕ್ಷಕರಿಗೆ 140ರಿಂದ 150 ಮನೆಗಳನ್ನು ಹೊಂದಿರುವ ಬ್ಲಾಕ್ ಹಂಚಿಕೆ ಮಾಡಲಾಗಿದೆ. 1.75 ಲಕ್ಷ ಶಿಕ್ಷಕರು ಹಾಗೂ ಇತರೆ ಸಿಬ್ಬಂದಿ ಸಮೀಕ್ಷೆ, ಸಂಬಂಧಿತ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ," ಎಂದು ಹೇಳಿದರು.

ಸಮೀಕ್ಷೆಯು ಎಲ್ಲಾ ಸಮುದಾಯಗಳ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳಲು, ಸಾಮಾಜಿಕ ನ್ಯಾಯವನ್ನು ಖಾತ್ರಿಪಡಿಸಲು ಮತ್ತು ತಿಳುವಳಿಕೆಯುಳ್ಳ ನೀತಿ ನಿರೂಪಣೆಯನ್ನು ಮಾಡಲು ಪ್ರಯತ್ನಿಸುತ್ತದೆ. ಸಮೀಕ್ಷೆಯು 60 ಪ್ರಶ್ನೆಗಳ ಸ್ವರೂಪವನ್ನು ಒಳಗೊಂಡಿರುತ್ತದೆ ಮತ್ತು ದತ್ತಾಂಶ ಸಂಗ್ರಹಣೆಗಾಗಿ ಮೊಬೈಲ್ ಅಪ್ಲಿಕೇಶನ್ ಅನ್ನು ಬಳಸುತ್ತದೆ. 1.2 ಲಕ್ಷ ಶಿಕ್ಷಕರು ಮತ್ತು 40,000 ಇತರ ಸಿಬ್ಬಂದಿ ಸೇರಿದಂತೆ ಸುಮಾರು 1.6 ಲಕ್ಷ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಭಾಗವಹಿಸುತ್ತಿದ್ದಾರೆ.

ಸಮೀಕ್ಷೆಯ ಕೆಲಸಕ್ಕೆ ಅನುಗುಣವಾಗಿ ಅಕ್ಟೋಬರ್ 8ರಿಂದ 18ರವರೆಗೆ ಸರ್ಕಾರಿ ಶಾಲೆಗಳಿಗೆ ರಜೆ ನೀಡಿ ಮುಚ್ಚಲಾಗಿದೆ. ಸಮೀಕ್ಷೆಗೆ ಸಹಾಯ ಮಾಡಲು ಶಿಕ್ಷಕರನ್ನು ನಿಯೋಜಿಸಲಾಗಿದ್ದು ಇವರಿಗೆ ತರಬೇತಿಯನ್ನು ಸಹ ನೀಡಲಾಗಿರುತ್ತದೆ.

ಕರ್ನಾಟಕ ಸರ್ಕಾರವು ಸಾಮಾನ್ಯವಾಗಿ ಜಾತಿ ಜನಗಣತಿ ಎಂದು ಕರೆಯಲಾಗುವ ಸಾಮಾಜಿಕ–ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಗಡುವನ್ನು ಅಕ್ಟೋಬರ್ 18ರವರೆಗೆ ವಿಸ್ತರಿಸಿದೆ. ಸಮೀಕ್ಷೆಯು ರಾಜ್ಯದ 2 ಕೋಟಿ ಕುಟುಂಬಗಳಲ್ಲಿ ಸುಮಾರು 7 ಕೋಟಿ ಜನರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ದತ್ತಾಂಶವನ್ನು ಸಂಗ್ರಹಿಸುವ ಗುರಿಯನ್ನು ಹೊಂದಿದೆ.

# ಶುಂಠಿಯ ಔಷಧೀಯ ಗುಣಗಳು ಮತ್ತು ಆರೋಗ್ಯ ಪ್ರಯೋಜನಗಳು

**ಶು**ಂಠಿಯನ್ನು ವಿವಿಧ ಭಕ್ಷ್ಯಗಳಲ್ಲಿ ಬಳಸಲಾಗುತ್ತದೆ. ಇದರಿಂದ ಆಹಾರದ ರುಚಿಯೂ ಹೆಚ್ಚುತ್ತದೆ ಮತ್ತು ಅದರೊಂದಿಗೆ ಹಲವಾರು ಆರೋಗ್ಯ ಪ್ರಯೋಜನಗಳೂ ದೊರೆಯುತ್ತವೆ. ಇದು ಅನೇಕ ಜನರಿಗೆ ತಿಳಿದಿಲ್ಲ. ಶುಂಠಿಯ ಪ್ರಯೋಜನಗಳನ್ನು ತರಕಾರಿಗಳಿಗೆ ಸೇರಿಸುವುದಲ್ಲದೆ ನೀವು ಶುಂಠಿಯನ್ನು ಕಚ್ಚಾ ತಿನ್ನಬಹುದು. ಹೀಗೆ ಮಾಡುವುದರಿಂದ ಅನೇಕ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುತ್ತದೆ. ಹೇಗೆಂದರೆ ಮುಂದೆ ಓದಿ.

ಶುಂಠಿಯಲ್ಲಿ, ಪಾಲಿಫಿನಾಲ್‌ಗಳು, ಫ್ಲೇವನಾಯ್ಡ್‌ಗಳು, ಸಪೋನಿನ್‌ಗಳು, ಫೈಲೇಟ್‌ಗಳು, ಇತ್ಯಾದಿ ಔಷಧೀಯ ರಾಸಾಯನಿಕಗಳ ವಿಧಗಳಿವೆ. ಅವುಗಳಲ್ಲಿ ಜಿಂಜರಾಲ್ (ಹಸಿ ಶುಂಠಿ) ಮತ್ತು ಶೋಗೋಲ್ (ಒಣ ಶುಂಠಿ) ಅತ್ಯುತ್ತಮ ಔಷಧಿಗಳಾಗಿವೆ.

**ಶುಂಠಿಯ ಆರೋಗ್ಯ ಪ್ರಯೋಜನಗಳು**

ವಾಕರಿಕೆ ನಿವಾರಿಸಲು ಶುಂಠಿಯು ಸಾಮಾನ್ಯ ಬಳಕೆಯಾಗಿದೆ. ಶುಂಠಿಯೂ ಹೊಟ್ಟೆಯಲ್ಲಿ ಅಮ್ಲೀಯತೆ ಮತ್ತು ವಾಕರಿಕೆಯನ್ನು ಪ್ರಚೋದಿಸುವ ಗ್ರಾಹಕಗಳನ್ನು ಪ್ರತಿಬಂಧಿಸುತ್ತದೆ. ಶುಂಠಿಯ ನಿಯಮಿತ ಸೇವನೆಯು ಕೀಮೋಥೆರಪಿ –ಸಂಬಂಧಿತ ರೋಗಲಕ್ಷಣಗಳನ್ನು ಕಡಿಮೆ ಮಾಡಲು ಸಹ ಸಹಾಯ ಮಾಡುತ್ತದೆ ಎಂದು ಕೆಲವು ಸಂಶೋಧನೆಗಳು ಬಹಿರಂಗಪಡಿಸಿವೆ. ಗರ್ಭಾವಸ್ಥೆಯ ಆರಂಭಿಕ ಹಂತಗಳಲ್ಲಿ ಶುಂಠಿಯನ್ನು ಬೆಳಗಿನ ಅಸ್ವಸ್ಥತೆಯನ್ನು ಗುಣಪಡಿಸಲು ಪ್ರಯೋಜನಕಾರಿ ಎಂದು ಪರಿಗಣಿಸಲಾಗುತ್ತದೆ. ಗರ್ಭಿಣಿಯರಲ್ಲಿ ವಾಕರಿಕೆ ನಿವಾರಣೆಗೆ ಇದು ತುಂಬಾ ಸಹಕಾರಿ. ಶುಂಠಿಯನ್ನು ಸೇವಿಸುವುದರಿಂದ ಜೀರ್ಣಕ್ರಿಯೆಗೆ ಸಹಾಯವಾಗುತ್ತದೆ. ಶುಂಠಿಯಲ್ಲಿ ಕಂಡುಬರುವ ಎಣ್ಣೆಯು ವಾಯುವಿನಂತಹ ಸಮಸ್ಯೆಗಳನ್ನು ನಿವಾರಿಸುತ್ತದೆ. ಸಂವೇದನಶೀಲ ಹೊಟ್ಟೆಯನ್ನು ಹೊಂದಿರುವ ಅಥವಾ ಮಸಾಲೆಯುಕ್ತ ಆಹಾರಕ್ಕೆ ಸೂಕ್ಷ್ಮವಾಗಿರುವ ಜನರು ಶುಂಠಿಯನ್ನು ಬಳಸಿದರೆ ಲಾಭವಾಗುವುದು. ಹೊಟ್ಟೆ ಉಬ್ಬರ ಮತ್ತು ಇತರ ಜೀರ್ಣಕಾರಿ ಸಮಸ್ಯೆಗಳನ್ನು ನಿವಾರಿಸಲು ಶುಂಠಿ ಸಹಾಯ ಮಾಡುತ್ತದೆ.

ಶುಂಠಿಯನ್ನು ಸೇವಿಸಿದ ನಂತರ, ನಮ್ಮ ರೋಗನಿರೋಧಕ ಶಕ್ತಿ ಉತ್ತಮವಾಗಿರುತ್ತದೆ. ನೆಗಡಿಯಾದಾಗ ಅನೇಕರು ಶುಂಠಿ ಮತ್ತು ಜೇನುತುಪ್ಪವನ್ನು ಸೇವಿಸುತ್ತಾರೆ. ಶುಂಠಿಯಲ್ಲಿ ಜಿಂಜರಾಲ್ ಎಂಬ ಪದಾರ್ಥವಿದ್ದು ಗಂಟಲಿನಲ್ಲಿ ಸಿಲುಕಿರುವ ಕಫವನ್ನು ಸಹ ತೆರವುಗೊಳಿಸುತ್ತದೆ. ಇದು ಒಣ ಕೆಮ್ಮು ಮತ್ತು ಗಂಟಲು ನೋವನ್ನು ಸಹ ನಿವಾರಿಸುತ್ತದೆ. ಶುಂಠಿಯು ಉರಿಯೂತ ನಿವಾರಕ ಗುಣಗಳನ್ನು ಹೊಂದಿದೆ. ವಿಶೇಷ ವಾಗಿ ನಿಮ್ಮ ದೇಹದ ವಿವಿಧ ಭಾಗಗಳಲ್ಲಿ ಬರುವ ನೋವುಗಳನ್ನು ನಿವಾರಿಸಲು ಶುಂಠಿ ಉಪಯುಕ್ತವಾಗಿದೆ. ಮುಟ್ಟಿನ ಸಮಯದಲ್ಲಿ ನೋವನ್ನು ನಿವಾರಿಸಲು ಇದು ಸಹಾಯ ಮಾಡುತ್ತದೆ ಎಂದು ಸಂಶೋಧನೆ ಬಹಿರಂಗಪಡಿಸಿದೆ. ಶುಂಠಿಯ ನಿಯಮಿತ ಸೇವನೆಯು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಶುಂಠಿಯು ಆಂಟಿವೈರಲ್, ಆಂಟಿಬ್ಯಾಕ್ಟೀರಿಯಲ್



ಮತ್ತು ಆಂಟಿಫಂಗಲ್ ಗುಣಗಳನ್ನು ಹೊಂದಿದೆ. ಇದು ವಿಶೇಷವಾಗಿ ವೈರಲ್ ರೋಗಗಳಿಂದ ರಕ್ಷಿಸುತ್ತದೆ. ಶುಂಠಿಯು ರಕ್ತ ಹೆಪ್ಪುಗಟ್ಟುವಿಕೆಯನ್ನು ಕಡಿಮೆ ಮಾಡುತ್ತದೆ, ಹೃದಯವನ್ನು ಬಲಪಡಿಸುತ್ತದೆ, ಹೃದಯವನ್ನು ರಕ್ಷಿಸುತ್ತದೆ ಮತ್ತು ರಕ್ತನಾಳಗಳ ಸ್ಥಿತಿಸ್ಥಾಪಕತ್ವ ವನ್ನು ಕಾಪಾಡಿಕೊಳ್ಳುವ ಮೂಲಕ ಗಟ್ಟಿಯಾಗು ವುದನ್ನು ತಡೆಯುತ್ತದೆ. ಇದು ಹೃದ್ರೋಗದಂತಹ ಕಾಯಿಲೆಗಳನ್ನು ತಡೆಯುತ್ತದೆ. ಹೃದಯಾ ಘಾತದ ಸಮಯದಲ್ಲಿ ತಕ್ಷಣ ಶುಂಠಿಯನ್ನು ಅಗಿದು ಹೃದಯಘಾತದ ಅಪಾಯವನ್ನು ತಪ್ಪಿಸಬಹುದು ಅಥವಾ ಮುಂದೂಡಬಹುದು. ಇದರಿಂದ, ತುರ್ತು ಪರಿಸ್ಥಿತಿಯಲ್ಲಿ ಆಸ್ಪತ್ರೆ ತಲುಪುವುದರೊಳಗೆ ಸಾವು ಸಂಭವಿಸುವುದನ್ನು ಮುಂದೂಡಬಹುದು.

ಶುಂಠಿಯು ರಕ್ತದಲ್ಲಿನ ಸಕ್ಕರೆಯನ್ನು ಕಡಿಮೆ ಮಾಡುವ ಗುಣಗಳನ್ನು ಹೊಂದಿದೆ ಆದ್ದರಿಂದ ಶುಂಠಿಯು ಮಧು ಮೇಹದಲ್ಲಿ ಉಪಯುಕ್ತವಾಗಿದೆ. ಅಲ್ಲದೆ, ರಕ್ತದಲ್ಲಿನ ಸಕ್ಕರೆ ನಿಯಂತ್ರಣವು ಹೃದ್ರೋಗದ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ.

ಶುಂಠಿಯು ಬಹಳಷ್ಟು ಉತ್ಕರ್ಷಣ ನಿರೋಧಕಗಳನ್ನು ಹೊಂದಿದೆ, ಜೊತೆಗೆ ಶುಂಠಿ ಉರಿಯೂತದ ಗುಣಲಕ್ಷಣಗಳನ್ನು ಹೊಂದಿದೆ, ಆದ್ದರಿಂದ, ಇದು ಕ್ಯಾನ್ಸರ್ ಅನ್ನು ಕಡಿಮೆ ಮಾಡಲು ಮತ್ತು ಕ್ಯಾನ್ಸರ್ ಕೋಶಗಳನ್ನು ನಾಶಪಡಿಸುವ ಮೂಲಕ ಅದರ ಬೆಳವಣಿಗೆಯನ್ನು ತಡೆಯಲು ಉಪಯುಕ್ತವಾಗಿದೆ.

# ಚಿತ್ರರಂಗದ ಎಲ್ಲಾ ದಾಖಲೆಗಳು ಉಡೀಸ್ ಯಶಸ್ವಿಯಾಗಿ ಪ್ರದರ್ಶನವಾಗುತ್ತಿರುವ ಕಾಂತಾರ–2

2022ರಲ್ಲಿ ಕನ್ನಡ ಸಿನೆಮಾಗೆ ಹೊಸ ಗುರುತನ್ನು ತಂದ 'ಕಾಂತಾರ' ಚಿತ್ರ ಈಗ ತನ್ನ ಮುಂದಿನ ಅಧ್ಯಾಯ ರಿಷಭ್ ಶೆಟ್ಟಿ ನಿರ್ದೇಶನದ 'ಕಾಂತಾರ–2' ಅಥವಾ ಅಧಿಕೃತವಾಗಿ ಕರೆಯಲ್ಪಡುವ "Kantara: A Legend - Chapter 1" ಚಿತ್ರ ಈ ಬಾರಿ ಪ್ರೇಕ್ಷಕರನ್ನು ಕಥೆಯ ಮೂಲದತ್ತ ಕರೆದೊಯ್ಯಲಿದೆ. ಈ ಚಿತ್ರವು ಹಿಂದಿನ ಭಾಗದ ಮುಂದುವರಿಕೆ ಅಲ್ಲ. ಪೂರ್ವಕಥೆ (Prequel) ಆಗಿದೆ. ಅಂದರೆ, ಮೊದಲ ಕಾಂತಾರದಲ್ಲಿ ಕಾಣಿಸಿಕೊಂಡ ಅತೀಂದ್ರಿಯ ಶಕ್ತಿ, ದೇವತೆಗಳ ಪೈಪೋಟಿ ಹಾಗೂ ಸಂಪ್ರದಾಯಗಳ ಹಿಂದೆ ಇರುವ ಪುರಾತನ ಕಥೆಯನ್ನು ಈ ಚಿತ್ರ ವಿವರಿಸುತ್ತದೆ.

ಕರಾವಳಿ ಕರ್ನಾಟಕದ ಪೂರ್ವ ಕಾಲಘಟ್ಟ ಹಿನ್ನೆಲೆಯಲ್ಲಿರುವ ಈ ಚಿತ್ರದಲ್ಲಿ, ಭೂತ ಕೋಲಾ ಸಂಪ್ರದಾಯ, ನಾಡಿನ ನಂಬಿಕೆಗಳು ಮತ್ತು ಮಾನವ–ದೈವ ಸಂಬಂಧಗಳ ವಿಶಿಷ್ಟ ಬಿಂಬಣೆಯಿದೆ. ರಿಷಭ್ ಶೆಟ್ಟಿ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಗುಲ್ಶನ್ ದೇವಯ್ಯ, ರುಕ್ಮಿಣಿ ವಸಂತ್ ಮತ್ತು ಜಯರಾಮ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಸಂಗೀತ ಸಂಯೋಜನೆಗೆ ಬಿ. ಅಜನೇಷ್ ಲೋಕನಾಥ್ ತಮ್ಮ ಗುರುತು ಮೂಡಿಸಿದ್ದಾರೆ.



ಕನ್ನಡ ಭಾಷೆಯ ಮಹಾಕಾವ್ಯದ ಕಾಲಘಟ್ಟದ ಪೌರಾಣಿಕ ಆಕ್ಷನ್ ಡ್ರಾಮಾ ಚಿತ್ರವಾಗಿದ್ದು, ರಿಷಬ್ ಶೆಟ್ಟಿ ಇದನ್ನು ಬರೆದು ನಿರ್ದೇಶಿಸಿದ್ದಾರೆ. ವಿಜಯ್ ಕಿರಗಂದೂರು ಮತ್ತು ಚಲುವೇಗೌಡ ಅವರು ಹೊಂಬಾಳೆ ಫಿಲ್ಮ್ ಬ್ಯಾನರ್ ಅಡಿಯಲ್ಲಿ ಇದನ್ನು ನಿರ್ಮಿಸಿದ್ದಾರೆ.

ಅಕ್ಟೋಬರ್ 10, ಶುಕ್ರವಾರದಂದು, ರಿಷಬ್ ಶೆಟ್ಟಿ ಅವರು ಮುಂಬೈನ ಐತಿಹಾಸಿಕ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಯಶಸ್ಸಿನ ನಂತರ ದೈವದ ಮೊರೆ ಹೋದ ನಟನ ನಡೆ ಎಲ್ಲರ ಗಮನ ಸೆಳೆಯಿತು.

ಅಕ್ಟೋಬರ್ 11ರಂದು, ರಿಷಬ್ ಶೆಟ್ಟಿ ಅವರು ಮುಂಬೈನ ಬಾಂದ್ರಾದಲ್ಲಿರುವ ಜನಪ್ರಿಯ ಗೈಟಿ ಗ್ಯಾಲಕ್ಸಿ (Gaiety Galaxy) ಥಿಯೇಟರ್‌ಗೆ ಅನಿರೀಕ್ಷಿತವಾಗಿ ಭೇಟಿ ನೀಡುವ ಮೂಲಕ ತಮ್ಮ ಅಭಿಮಾನಿಗಳಿಗೆ ದೊಡ್ಡ ಸರ್‌ಪ್ರೈಸ್ ನೀಡಿದರು. ಚಿತ್ರದ ಪ್ರದರ್ಶನದ ನಡುವೆ ಸ್ಟೇಜ್ ಏರಿದ ನಟನನ್ನು ಕಂಡ ಅಭಿಮಾನಿಗಳು ಸಂಭ್ರಮದಿಂದ ಹುಚ್ಚೆದ್ದು ಕುಣಿದರು.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೋಗಳಲ್ಲಿ ಕಾರಿನ ಓಪನ್ ರೂಫ್ ತೆರೆದ ಕಾರಿನಲ್ಲಿ ನಿಂತಿದ್ದ ನಟ ರಿಷಬ್ ಶೆಟ್ಟಿ ಅವರಿಗೆ ಅಭಿಮಾನಿಗಳು ಹೂವಿನ ದಳಗಳನ್ನು ಸುರಿಸುತ್ತಾ, ಜಯಕಾರ ಹಾಕುತ್ತಾ ಅದ್ದೂರಿ ಸ್ವಾಗತ ನೀಡಿದ್ದು ಕಂಡುಬಂತು. ಅಭಿಮಾನಿಗಳು ತೋರಿದ ಪ್ರೀತಿಗೆ ಕೈಬೀಸಿ ರಿಷಬ್ ಪ್ರತಿಕ್ರಿಯೆ ತೋರಿದರು.


(Hombale Films) ಹೊಂಬಾಳೆ ಚಿತ್ರ ಸಂಸ್ಥೆ ನೀಡಿರುವ ಹೇಳಿಕೆಯಂತೆ, 'ಕಾಂತಾರ: ಅಧ್ಯಾಯ 1' ಚಿತ್ರವು ತನ್ನ ಮೊದಲ ವಾರದಲ್ಲಿ ವಿಶ್ವಾದ್ಯಂತ ರೂ. 509.25 ಕೋಟಿಗೂ ಹೆಚ್ಚು (GBOC) ಗಳಿಕೆಯನ್ನು ದಾಟಿದೆ. "ದೈವಿಕ ಸಿನಿಮಾ ಎಬ್ಬಿಸಿದ ಬಿರುಗಾಳಿಯು ಬಾಕ್ಸಾಫೀಸ್‌ನಲ್ಲಿ ಗಗನಕ್ಕೇರುತ್ತಿದೆ. ಬ್ಲಾಕ್‌ಬಸ್ಟರ್ ಕಾಂತಾರ ನಿಮ್ಮ ಸಮೀಪದ ಚಿತ್ರಮಂದಿರಗಳಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಳ್ಳುತ್ತಿದೆ," ಎಂದು ಹೊಂಬಾಳೆ ಫಿಲ್ಮ್ ಸಂತೋಷ ವ್ಯಕ್ತಪಡಿಸಿದೆ.

# ನೋಂದಣಿ ಕಡ್ಡಾಯವಲ್ಲದ ದಸ್ತಾವೇಜುಗಳಿಗೆ ಸೇವೆ । ಆಧಾರ್ ವಿವರ, ಆನ್‌ಲೈನ್ ಶುಲ್ಕ ಕಡ್ಡಾಯ: ಕಾವೇರಿ 2.0 ತಂತ್ರಾಂಶದಲ್ಲಿ ಡಿಜಿಟಲ್ ಇ–ಸ್ಟ್ಯಾಂಪ್ ಲಭ್ಯ

**ಬೆಂ**ಗಳೂರು ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ 'ಕಾವೇರಿ 2.0' ತಂತ್ರಾಂಶದಲ್ಲಿ ಡಿಜಿಟಲ್ ಇ–ಸ್ಟ್ಯಾಂಪ್ ಸೇವೆ ನೀಡಲು ತಂತ್ರಾಂಶ ಅಳವಡಿಸಲಾಗಿದ್ದು, ಭೌತಿಕ ಇ–ಸ್ಟ್ಯಾಂಪ್ ಸೌಲಭ್ಯ ಕೆಲವೇ ದಿನಗಳಲ್ಲಿ ಮರೆಯಾಗಲಿದೆ.

ಸ್ಟ್ಯಾಂಪ್ ಡ್ಯೂಟಿ ಪಾವತಿಸಲು ಭೌತಿಕ ಸ್ಟ್ಯಾಂಪ್ ಪೇಪರ್‌ಗಳನ್ನು ಮಾರಾಟಗಾರರಿಂದ ಅಧಿಕೃತ ಖರೀದಿಸಬೇಕಾಗಿತ್ತು. ಛಾಪಾ ಕಾಗದ ಹಗರಣ ನಡೆದು ಸರ್ಕಾರಕ್ಕೆ ಸಾವಿರಾರು ಕೋಟಿ ರೂ. ನಷ್ಟವಾದ ಹಿನ್ನೆಲೆ ಮುದ್ರಿತ ಪೇಪರ್ ರದ್ದು ಮಾಡಲಾಗಿತ್ತು.

ಆ ನಂತರ ಅಧಿಕೃತ ಮಾರಾಟ ಗಾರರು ಮತ್ತು ಸಹಕಾರ ಬ್ಯಾಂಕಿನವರು ಇ–ಸ್ಟ್ಯಾಂಪ್ ಪೇಪರ್ ಸೇವೆ ಪರಿಚಯಿಸಿದರು. ಇದೀಗ ಸೇವೆಯನ್ನು ಮತ್ತಷ್ಟು ಅಪ್‌ಡೇಟ್ ಮಾಡಿದ ಇಲಾಖೆ ಕಾವೇರಿ 2.0 ವೆಬ್‌ಸೈಟ್‌ನಲ್ಲೇ ಡಿಜಿಟಲ್ ಇ–ಸ್ಟ್ಯಾಂಪ್ ಪೇಪರ್ ಸೇವೆ ಪರಿಚಯಿಸಿದೆ. ಇದಕ್ಕಾಗಿ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಸೆಕ್ಷನ್ 10,68ಕ್ಕೆ ತಿದ್ದುಪಡಿ ತಂದಿದೆ.




ಪ್ರಸ್ತುತ ನೋಂದಣಿ ಕಡ್ಡಾಯವಲ್ಲದ ದಸ್ತಾವೇಜುಗಳಿಗೆ ಮಾತ್ರ ಡಿಜಿಟಲ್ ಇ–ಸ್ಟ್ಯಾಂಪ್ ಪೇಪರ್ ನೀಡಲಾಗುತ್ತಿದೆ. ಇದನ್ನು ಪಡೆಯಲು ಸಾರ್ವಜನಿಕರು ತಮ್ಮ ಆಧಾರ್ ಆಧಾರಿತ ಇ–ಸಹಿ ಅಗತ್ಯ ಇರುವ ಕಾರಣ ಆಧಾರ್ ಕಡ್ಡಾಯವಾಗಿ ಬೇಕಾಗಿದೆ. ಇ–ಸಹಿ ಜತೆಗೆ ಪೋಟೋ ಸಹ ಡಿಜಿಟಲ್ ಇ–ಸ್ಟ್ಯಾಂಪ್‌ನಲ್ಲಿ ಮುದ್ರಿತವಾಗಿ ಕೈಸೇರಲಿದೆ. ಯಾವ ಉದ್ದೇಶಕ್ಕೆ ಇ–ಸ್ಟ್ಯಾಂಪ್ ಪೇಪರ್ ಮಾಡಲಾಗುತ್ತಿದೆ. ಅದರ ಮೌಲ್ಯ ಎಷ್ಟೆಂದು ಮುದ್ರಣ ಮಾಡಿದರೆ ಸಾಕು ಮುದ್ರಣ ಶುಲ್ಕವನ್ನು ಸ್ವಯಂಚಾಲಿತವಾಗಿ ಲೆಕ್ಕಚಾರ ಮಾಡಿ ತೋರಿಸಲಿದೆ. ಆನ್‌ಲೈನ್‌ನಲ್ಲಿಯೇ ಶುಲ್ಕ ಪಾವತಿಸಿದರೆ ಡಿಜಿಟಲ್ ಇ–ಸ್ಟ್ಯಾಂಪ್ ಅಪ್ಲಿಕೇಷನ್‌ನಲ್ಲಿ ವಿಶಿಷ್ಟ ಸಂಖ್ಯೆಯ ಇ–ಸ್ಟ್ಯಾಂಪ್ ಸಿಗಲಿದೆ. ಇದನ್ನು ಮುಖ್ಯ ನಿಯಂತ್ರಕ ಕಂದಾಯ ಇಲಾಖೆಯ ಪ್ರಾಧಿಕಾರ ದೃಢೀಕರಿಸಿದ ಮೇಲೆ ಇ–ಸ್ಟ್ಯಾಂಪ್ ಭಂಡಾರದಲ್ಲಿ ಶಾಶ್ವತವಾಗಿ ಸಂಗ್ರಹಿಸಲಾಗುತ್ತದೆ. ಇದರೊಂದಿಗೆ ಇ–ಸ್ಟ್ಯಾಂಪ್‌ಗೆ ಆಧಾರ್ ಇ–ಸೈನ್ ಅಥವಾ ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ನಿಬಂಧನೆಗಳ ಪ್ರಕಾರ ನೀಡಲಾದ ಡಿಜಿಟಲ್ ಸಹಿಯುಳ್ಳ ಪ್ರಮಾಣ ಪತ್ರ ನೀಡಲಾಗುತ್ತದೆ. ಡಿಜಿಟಲ್ ಇ–ಸ್ಟ್ಯಾಂಪ್ ಭಂಡಾರದಲ್ಲಿ ಸಂಗ್ರಹಿಸಿದ ಡಿಜಿಟಲ್ ಇ–ಸ್ಟಾಂಪ್‌ಗಳನ್ನು ಪರಿಶೀಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

**ಸೇವೆ ಪಡೆಯುವುದು ಹೇಗೆ:** ಕಾವೇರಿ 2.0 ತಂತ್ರಾಂಶಕ್ಕೆ ಸಿಟಿಜನ್ ಲಾಗಿನ್ ಮೂಲಕ ಪ್ರವೇಶಿಸಿ ಡಿಜಿಟಲ್ ಇ–ಸ್ಟ್ಯಾಂಪ್ ಸೇವೆ ಮೇಲೆ ಕ್ಲಿಕ್ ಮಾಡಿದಾಗ ನೇಚರ್ ಆಫ್ ಡಾಕ್ಯೂಮೆಂಟ್‌ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು. ಆ ನಂತರ ಸಬ್ ಆರ್ಟಿಕಲ್ ಒಕೆ ಮಾಡಿ ಮುಂದುವರಿದರೆ ಅಲ್ಲಿ ವೈಯಕ್ತಿಕ ಮತ್ತು ಸಂಘ–ಸಂಸ್ಥೆಯೇ ಎಂಬುದರ ಮೇಲೆ ಕ್ಲಿಕ್ ಮಾಡಿಕೊಳ್ಳಬೇಕು. ಆ ನಂತರ ಸಾರ್ವಜನಿಕರು ತಮ್ಮ ವಿವರದ ಜಾಗದಲ್ಲಿ ಆಧಾರ್ ನಂಬರ್ ಅಪ್‌ಲೋಡ್ ಮಾಡಿದಾಗ ಅದರಲ್ಲಿನ ಇ–ಸಹಿ ಮತ್ತು ಫೋಟೋ ತೆಗೆದುಕೊಳ್ಳಲಿದೆ. ಆ ನಂತರ ಎಷ್ಟು ಮೊತ್ತದ ವ್ಯವಹಾರ ಎಂದು ನಮೂದಿಸಿದಾಗ ಸ್ವಯಂ ಚಾಲಿತವಾಗಿ ಮುದ್ರಾಂಕ ಶುಲ್ಕ ಲೆಕ್ಕಾಚಾರ ಮಾಡಿ ತೋರಿಸಲಿದೆ. ಆನ್‌ಲೈನ್‌ನಲ್ಲಿ ಶುಲ್ಕ ಪಾವತಿಸಿದಾಗ ನಮಗೆ ಡಿಜಿಟಲ್ ಇ–ಸ್ಟ್ಯಾಂಪ್ ಸೇವೆ ದೊರೆಯಲಿದೆ.

**ನೋಂದಣಿ ಕಡ್ಡಾಯವಲ್ಲದ ದಸ್ತಾವೇಜು:** *ಬ್ಯಾಂಕ್ ಗ್ಯಾರಂಟಿ, * ಸಾಲ ಒಪ್ಪಂದ, * ಇಂಡೆಮ್ನಿಟಿ ಬಾಂಡ್, * ಹೈಪೋಥೆಕೇಶನ್ ಒಪ್ಪಂದ, * ಪಣ ಮತ್ತು ಅಡಮಾನ, * ಘೋಷಣೆ (ಡಿಕ್ಲರೇಷನ್), * ಪ್ರಾಮಿಸ್ಸರಿ ನೋಟ್ಸ್, * ಅಫಿಡವಿಟ್, * ಸ್ವಾಧೀನರಹಿತ ಕ್ರಯದ ಕರಾರು.

## ವೆಸ್ಟ್‌ಇಂಡೀಸ್ ವಿರುದ್ಧ ಪ್ರಥಮ ಟೆಸ್ಟಿನಲ್ಲಿ ಭಾರತಕ್ಕೆ ಜಯ




ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಭಾರತವು ವೆಸ್ಟ್ ಇಂಡೀಸ್ ವಿರುದ್ಧ ಸಂಪೂರ್ಣ ಪ್ರಾಬಲ್ಯ ಸಾಧಿಸಿ, ಕೇವಲ ಮೂರೇ ದಿನಗಳಲ್ಲಿ ಇನಿಂಗ್ಸ್ ಹಾಗೂ 140 ರನ್‌ಗಳ ಅಂತರದಿಂದ ಅದ್ಭುತ ಜಯ ಗಳಿಸಿದೆ. ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗ್–ಎಲ್ಲ ವಿಭಾಗಗಳಲ್ಲಿಯೂ ಭಾರತ ಶ್ರೇಷ್ಠತೆಯನ್ನು ತೋರಿಸಿತು.

ಮೊದಲಿಗೆ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ವೆಸ್ಟ್ ಇಂಡೀಸ್ ತಂಡ ಆರಂಭದಲ್ಲೇ ಸಂಕಷ್ಟಕ್ಕೆ ಸಿಲುಕಿತು. ಮೊಹಮ್ಮದ್ ಸಿರಾಜ್‌ನ ವೇಗ ಮತ್ತು ನಿಖರ ಬೌಲಿಂಗ್, ಜೊತೆಗೆ ಜಸ್‌ಪ್ರೀತ್ ಬುಮ್ರಾ ಅವರ ನಿಯಂತ್ರಿತ ಓವರ್‌ಗಳು ಎರಡೂ ಸೇರಿ ಅತಿಥಿ ತಂಡದ ಟಾಪ್ ಆರ್ಡರ್‌ನ ಮೇಲೆ ಭಾರೀ ಒತ್ತಡ ಸೃಷ್ಟಿಸಿದವು.

ಮೊದಲ ದಿನದ ಊಟಾವಕಾಶಕ್ಕೆ ಮುನ್ನವೇ ಅತಿಥಿ ತಂಡ 90/5 ಅಂಕಗಳಲ್ಲಿ ಕುಸಿದುಬಿತ್ತು. ನಂತರ ತರೆಗೆಲೆರದಂತೆ ವೆಸ್ಟ್ ಇಂಡೀಸ್ ಬ್ಯಾಟ್ಸ್‌ಮ್ಯಾನ್‌ಗಳು ಒಬ್ಬೊಬ್ಬರಂತೆ ಸಂಪೂರ್ಣ ತಂಡ ಕೇವಲ 162 ರನ್‌ಗಳಿಗೆ ಆಲೌಟ್ ಆಯಿತು. ಭಾರತೀಯ ಬೌಲರ್‌ಗಳ ಶಿಸ್ತಿನ ಹಾಗೂ ತೀವ್ರ ದಾಳಿಯ ಎದುರು ವೆಸ್ಟ್ ಇಂಡೀಸ್ ಬ್ಯಾಟಿಂಗ್ ಸಂಪೂರ್ಣವಾಗಿ ಕುಸಿದುಬಿತ್ತು.

ವೆಸ್ಟ್ ಇಂಡೀಸ್ ಮೊದಲು ಬ್ಯಾಟಿಂಗ್ ಮಾಡಿ ಕೇವಲ 162 ರನ್‌ಗಳಿಗೆ ಆಲೌಟ್ ಆಯಿತು. ಸಿರಾಜ್ ಮತ್ತು ಬುಮ್ರಾ ತೀವ್ರ ಬೌಲಿಂಗ್‌ನಿಂದ ಅತಿಥಿ ತಂಡವನ್ನು ಕುಸಿತಕ್ಕೀಡಾದರು. ಭಾರತದ ಪ್ರತಿಕ್ರಿಯೆ ಅದ್ಭುತವಾಗಿತ್ತು – ಕೆ.ಎಲ್. ರಾಹುಲ್, ಧ್ರುವ್ ಜುರೆಲ್, ಹಾಗೂ ರವೀಂದ್ರ ಜಡೇಜಾ ತಲಾ ಶತಕ ಬಾರಿಸಿ ತಂಡವನ್ನು 448/5 (ಡಿಕ್ಲೇರ್) ಮಟ್ಟಕ್ಕೆ ಎತ್ತಿದರು.

ಫಾಲೋಆನ್‌ನಲ್ಲಿ ವೆಸ್ಟ್ ಇಂಡೀಸ್ ಮತ್ತೊಮ್ಮೆ ಕುಸಿದು 146 ರನ್‌ಗಳಿಗೆ ಆಲೌಟ್ ಆಯಿತು. ಜಡೇಜಾ 4 ವಿಕೆಟ್‌ಗಳನ್ನು ಪಡೆದು, ಬ್ಯಾಟ್ ಮತ್ತು ಬಾಲ್ ಎರಡರಲ್ಲಿಯೂ ಮಿಂಚಿ ಪ್ಲೇಯರ್ ಆಫ್ ದಿ ಮ್ಯಾಚ್ ಆಗಿ ಆಯ್ಕೆಯಾದರು. ಭಾರತವು ವೆಸ್ಟ್ ಇಂಡೀಸ್ ವಿರುದ್ಧ ಮೊದಲ ಟೆಸ್ಟ್‌ನಲ್ಲಿ ಇನಿಂಗ್ಸ್ ಹಾಗೂ 140 ರನ್‌ಗಳ ಅಂತರದಿಂದ ಭರ್ಜರಿ ಜಯ ಸಾಧಿಸಿದೆ. ಕೇವಲ ಮೂರೇ ದಿನಗಳಲ್ಲಿ ಗೆಲುವು ದಾಖಲಿಸಿದ ಭಾರತ, ಸರಣಿಯ ಆರಂಭದಲ್ಲೇ ಪ್ರಾಬಲ್ಯ ತೋರಿಸಿದೆ. ನಾಯಕ ಶುಭನ್ ಗಿಲ್ ಈ ಗೆಲುವನ್ನು "ಪರಿಪೂರ್ಣ ಪಂದ್ಯ" ಎಂದು ವರ್ಣಿಸಿದರು.







Editor & Editorial Board, Publisher and Owned by Janaki Vijayakumar # 555, 17th Cross, SBM Colony, Srinivasanagar, Banashankari, Bengaluru-560050. Printed At : M/s Apoorva Printers & Publishers, 179, Suggata Road, H.M. Halli, Bengaluru-562157, Editor Janaki Vijayakumar